ಸರ್ಕಾರವು ಜಾರಿಗೆ ತಂದಿರುವ ಇತ್ತೀಚಿನ ಹಲವು ಹೊಸ ಯೋಜನೆಗಳಿಂದ ಪ್ರತಿ ತಾಲ್ಲೂಕುಗಳಲ್ಲಿ ಸರ್ಕಾರಿ/ ಸಾರ್ವಜನಿಕ ಕೆಲಸಗಳು ಹೆಚ್ಚಾಗಿರುವುದನ್ನು ಗಮನಿಸಿ, ಹೆಚ್ಚು ಕೆಲಸದ ಒತ್ತಡ ಇರುವ ರಾಜಸ್ವ ನಿರೀಕ್ಷಕರ ಹಾಗೂ ಗ್ರಾಮಲೆಕ್ಕಿಗರ ವೃತ್ತಗಳನ್ನು ವಿಭಜಿಸುವ ಕುರಿತು, ಜಿಲ್ಲೆಯ ಎಲ್ಲಾ ತಹಶೀಲ್ದಾರ್‌ರವರಿಂದ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಸೂಚಿಸಲಾಗಿತ್ತು. ಅದರಂತೆ ಎಲ್ಲಾ ತಹಶೀಲ್ದಾರ್ ರವರು ಮರುವಿಂಗಡಣೆ ಮಾಡಿ ಹೊಸದಾಗಿ ಸೃಜಿಸಬೇಕಿರುವ ವೃತ್ತಗಳ ವಿವರವನ್ನು ಸಲ್ಲಿಸಿರುತ್ತಾರೆ. ಸದರಿ ಪ್ರಸ್ತಾವನೆಗಳನ್ನು ಕ್ರೋಢೀಕರಿಸಿ ದಿನಾಂಕ 08–12–2013 ರಂದು ನಡೆದ ಸಭೆಯಲ್ಲಿ ಉಪವಿಭಾಗಾಧಿಕಾರಿಗಳು, ಬೆಂಗಳೂರು ಉತ್ತರ / ದಕ್ಷಿಣ ಉಪವಿಭಾಗ ಮತ್ತು ತಹಶೀಲ್ದಾರ್, ಬೆಂಗಳೂರು ಪೂರ್ವ / ಉತ್ತರ / ಉತ್ತರ (ಅಪರ) / ದಕ್ಷಿಣ / ಆನೇಕಲ್ ತಾಲ್ಲೂಕು ರವರುಗಳೊಂದಿಗೆ ಚರ್ಚಿಸಿ, ಆಡಳಿತಾತ್ಮಕ ದೃಷ್ಟಿಯಿಂದ ಹಾಗೂ ತಾಲ್ಲೂಕಿನಲ್ಲಿ ಅತೀ ಹೆಚ್ಚು ಕೆಲಸದ ಒತ್ತಡ ಇರುವ ರಾಜಸ್ವ ನಿರೀಕ್ಷಕರ ಮತ್ತು ಗ್ರಾಮಲೆಕ್ಕಿಗರ ವೃತ್ತಗಳನ್ನು ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ರ ಕಲಂ 4 ಮತ್ತು 5 ಹಾಗೂ ಕರ್ನಾಟಕ ಭೂ ಕಂದಾಯ ನಿಯಮಗಳು 1966 ರ ನಿಯಮ 3ರನ್ವಯ ವಿಭಜಿಸಲು ತೀರ್ಮಾನಿಸಲಾಗಿದೆ.

ಆದ್ದರಿಂದ ಆದೇಶ ಸಂಖ್ಯೆ: 666 ಎಎಸ್‌ಡಿ 2012 ದಿನಾಂಕ 04–07–2013 ರ ಆದೇಶದಂತೆ, ಬೆಂಗಳೂರು ನಗರ ಜಿಲ್ಲೆಯ ತಹಶೀಲ್ದಾರ್, ಬೆಂಗಳೂರು ಪೂರ್ವ / ಉತ್ತರ / ಉತ್ತರ (ಅಪರ) / ದಕ್ಷಿಣ / ಆನೇಕಲ್ ತಾಲ್ಲೂಕುಗಳಿಗೆ ಹೊಸದಾಗಿ ಸೃಜಿಸಿರುವ ಮೂರು ರಾಜಸ್ವ ನಿರೀಕ್ಷಕರ ಮತ್ತು ಮೂರು ಗ್ರಾಮಲೆಕ್ಕಿಗರ ವೃತ್ತಗಳನ್ನು ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ರ ಕಲಂ 4 ಮತ್ತು 5 ಹಾಗೂ ಕರ್ನಾಟಕ ಭೂ ಕಂದಾಯ ನಿಯಮಗಳು 1966 ರ ನಿಯಮ 3ರನ್ವಯ ವಿಭಜಿಸಲು ತೀರ್ಮಾನಿಸಿ, ಸರ್ಕಾರದ ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ರ ಕಲಂ 6ರನ್ವಯ ಮತ್ತು ಕರ್ನಾಟಕ ಭೂ ಕಂದಾಯ ನಿಯಮಗಳು 1966 ರ ನಿಯಮ 3 ಮತ್ತು 4 ರನ್ವಯ ಸಾರ್ವಜನಿಕ ಆಕ್ಷೇಪಣೆಗಾಗಿ ಈ ಅಧಿಸೂಚನೆ ಹೊರಡಿಸಿದ್ದು, ಸಾರ್ವಜನಿಕರಿಂದ ಅಥವಾ ಆಸಕ್ತರಿಂದ ಯಾವುದಾದರೂ ಆಕ್ಷೇಪಣೆಗಳು ಇದ್ದಲ್ಲಿ ಈ ಪ್ರಕಟಣೆ ದಿನಾಂಕದಿಂದ 15 ದಿನಗಳಲ್ಲಿ ಜಿಲ್ಲಾಧಿಕಾರಿ, ಬೆಂಗಳೂರು ನಗರ ಜಿಲ್ಲೆ ಇವರಿಗೆ ಲಿಖಿತವಾಗಿ ಸಲ್ಲಿಸತಕ್ಕದ್ದು. ನಿಗದಿತ ಅವಧಿಯಲ್ಲಿ ಆಕ್ಷೇಪಣೆಗಳು ಬಾರದೇ ಇದ್ದಲ್ಲಿ ಈ ಅಧಿಸೂಚನೆಯಂತೆ ಖಾಯಂಗೊಳಿಸಲಾಗಿದೆ ಎಂದು ಭಾವಿಸುವುದು.

ಬೆಂಗಳೂರು ಉತ್ತರ ತಾಲ್ಲೂಕು:

ವಿಭಜಿಸಿ ಹೊಸದಾಗಿ ಸೃಜಿಸಿರುವ ರಾಜಸ್ವ ನಿರೀಕ್ಷಕರ ವೃತ್ತಗಳು.

1.ಹಾಲಿ ಕಾರ್ಯನಿರ್ವಹಿಸುತ್ತಿರುವ ಚಾಮರಾಜಪೇಟೆ ವೃತ್ತವನ್ನು ವಿಭಜಿಸಿ ಹೊಸದಾಗಿ ಚಾಮರಾಜಪೇಟೆ–2 ಎಂಬ ವೃತ್ತವನ್ನು ಸೃಜಿಸಲಾಗಿದೆ.

1.ಚಾಮರಾಜಪೇಟೆ ವೃತ್ತ – 1 ಕೇಂದ್ರಸ್ಥಾನ – ಚಾಮರಾಜಪೇಟೆ ಒಳಪಡುವ ವಾರ್ಡ್‌ಗಳು/ಗ್ರಾಮಗಳು			2. ಚಾಮರಾಜಪೇಟೆ ವೃತ್ತ – 2 (ಹೊಸದಾಗಿ ಸೃಜಿಸಲಾದ ವೃತ್ತ) ಕೇಂದ್ರಸ್ಥಾನ – ಚಾಮರಾಜಪೇಟೆ ಒಳಪಡುವ ವಾರ್ಡ್‌ಗಳು/ಗ್ರಾಮಗಳು		
ಕ್ರ.ಸಂ.	**ವಾರ್ಡ್ ಸಂಖ್ಯೆ**	**ವಾರ್ಡ್ ಹೆಸರು**	**ಕ್ರ.ಸಂ.**	**ವಾರ್ಡ್ ಸಂಖ್ಯೆ**	**ವಾರ್ಡ್ ಹೆಸರು**
1	135	ಪಾದರಾಯನಪುರ	1	157	ಘಾಳಿಆಂಜನೇಯಸ್ವಾಮಿ ದೇವಸ್ಥಾನ
2	136	ಜಗಜೀವನರಾಂನಗರ	2	158	ದೀಪಾಂಜಲಿನಗರ
3	137	ರಾಯಪುರಂ	3	134	ಬಾಪೂಜಿನಗರ
4	138	ಚಲುವಾದಿಪಾಳ್ಯ			
5	140	ಚಾಮರಾಜಪೇಟೆ			
6	141	ಆಜಾದ್‌ನಗರ			
7	155	ಗವಿಪುರಂ			

2.ಹಾಲಿ ಕಾರ್ಯನಿರ್ವಹಿಸುತ್ತಿರುವ ರಾಜಾಜಿನಗರ ಸಿಟಿವೃತ್ತ ಮತ್ತು ಮಲ್ಲೇಶ್ವರಂ ವೃತ್ತವನ್ನು ವಿಭಜಿಸಿ, ಮರುವಿಂಗಡಿಸಿ ರಾಜಾಜಿನಗರ–2 ಎಂಬ ಹೊಸ ವೃತ್ತವನ್ನು ಸೃಜಿಸಲಾಗಿದೆ.

1.ರಾಜಾಜಿನಗರ ಸಿಟಿ ವೃತ್ತ – 1 ಕೇಂದ್ರಸ್ಥಾನ – ರಾಜಾಜಿನಗರ ಒಳಪಡುವ ವಾರ್ಡ್‌ಗಳು/ಗ್ರಾಮಗಳು			2. ರಾಜಾಜಿನಗರ ಸಿಟಿವೃತ್ತ – 2 (ಹೊಸದಾಗಿ ಸೃಜಿಸಲಾದ ವೃತ್ತ)ಕೇಂದ್ರಸ್ಥಾನ – ರಾಜಾಜಿನಗರ ಒಳಪಡುವ ವಾರ್ಡ್‌ಗಳು/ ಗ್ರಾಮಗಳು			3. ಮಲ್ಲೇಶ್ವರಂ ವೃತ್ತ ಕೇಂದ್ರಸ್ಥಾನ – ಮಲ್ಲೇಶ್ವರಂ ಒಳಪಡುವ ವಾರ್ಡ್‌ಗಳು/ಗ್ರಾಮಗಳು		
ಕ್ರ ಸಂ.	**ವಾರ್ಡ್ ಸಂಖ್ಯೆ**	**ವಾರ್ಡ್ ಹೆಸರು**	**ಕ್ರ. ಸಂ.**	**ವಾರ್ಡ್ ಸಂಖ್ಯೆ**	**ವಾರ್ಡ್ ಹೆಸರು**	**ಕ್ರ. ಸಂ.**	**ವಾರ್ಡ್ ಸಂಖ್ಯೆ**	**ವಾರ್ಡ್ ಹೆಸರು**
1	67	ನಾಗಪುರ	1	68	ಮಹಾಲಕ್ಷ್ಮಿ ಪುರಂ ಲೇಔಟ್	1	45	ಮಲ್ಲೇಶ್ವರಂ
2	75	ನಾಗಪುರ	2	36	ಮತ್ತಿಕೆರೆ	2	66	ಸುಬ್ರಮಣ್ಯನಗರ

3	107	ಶಿವನಗರ	3	44	ಮಾರಪ್ಪನಪಾಳ್ಯ	3	65	ಕಾಡುಮಲ್ಲೇಶ್ವರ
4	108	ಶ್ರೀರಾಮಮಂದಿರ	4	42	ಗೊರಗುಂಟೆಪಾಳ್ಯ	4	17	ಜೆ.ಪಿ.ಪಾರ್ಕ್
5	97	ದಯಾನಂದನಗರ	5	38	ಹೆಚ್.ಎಂ.ಟಿ.	5	64	ರಾಜಮಹಲ್ ಗುಟ್ಟಹಳ್ಳಿ
6	98	ಪ್ರಕಾಶ್‌ನಗರ				6	95	ಸುಭಾಷ್‌ನಗರ
7	99	ರಾಜಾಜಿನಗರ				7	37	ಯಶವಂತಪುರ
						8	77	ದತ್ತಾತ್ರೇಯ ದೇವಸ್ಥಾನ

3.ಹಾಲಿ ಕಾರ್ಯನಿರ್ವಹಿಸುತ್ತಿರುವ ಯಶವಂತಪುರ ಹೋಬಳಿಯ ಸಾಣೆಗುರುವನಹಳ್ಳಿ ವೃತ್ತವನ್ನು ವಿಭಜಿಸಿ ಸಾಣೆಗುರುವನಹಳ್ಳಿ– 2 ಎಂಬ ಹೊಸ ವೃತ್ತವನ್ನು ಸೃಜಿಸಲಾಗಿದೆ.

1. ಸಾಣೆಗುರುವನಹಳ್ಳಿ–1 ಕೇಂದ್ರಸ್ಥಾನ – ಮಲ್ಲತ್ತಹಳ್ಳಿ ಒಳಪಡುವ ಗ್ರಾಮಲೆಕ್ಕಿಗರ ವೃತ್ತಗಳು		1. ಸಾಣೆಗುರುವನಹಳ್ಳಿ–2 (ಹೊಸದಾಗಿ ಸೃಜಿಸಲಾದ ವೃತ್ತ – ಸಾಣೆಗುರುವನಹಳ್ಳಿ ವೃತ್ತ) ಕೇಂದ್ರಸ್ಥಾನ – ಸಾಣೆಗುರುವನಹಳ್ಳಿ ಒಳಪಡುವ ಗ್ರಾಮಲೆಕ್ಕಿಗರ ವೃತ್ತಗಳು	
ಕ್ರ.ಸಂ.	**ವೃತ್ತದ ಹೆಸರು**	**ಕ್ರ.ಸಂ.**	**ವೃತ್ತದ ಹೆಸರು**
1	ಮಲ್ಲತ್ತಹಳ್ಳಿ	1	ಸಾಣೆಗುರುವನಹಳ್ಳಿ
2	ಹೇರೋಹಳ್ಳಿ	2	ಚೊಕ್ಕಸಂದ್ರ
3	ಕೊಡಿಗೇಹಳ್ಳಿ		

ಮಂಜೂರು ಮಾಡಿರುವಂತಹ 3 ಗ್ರಾಮಲೆಕ್ಕಿಗರ ಹುದ್ದೆಗಳನ್ನು ಈ ಕೆಳಕಂಡಂತೆ ಸೃಜಿಸಲಾಗಿರುತ್ತದೆ.

ಸೃಜಿಸಲಾಗಿರುವ ಗ್ರಾಮಲೆಕ್ಕಿಗರ ಹುದ್ದೆ	**ಕಾರ್ಯನಿರ್ವಹಿಸಬೇಕಾದ ಸ್ಥಳ**
ಗ್ರಾಮಲೆಕ್ಕಿಗರು, ಅಟಲ್ ಜನಸ್ನೇಹಿ ಕೇಂದ್ರ , ಸಿಟಿವೃತ್ತ ರಾಜಾಜಿನಗರ	ಅಟಲ್ ಜನಸ್ನೇಹಿ ಕೇಂದ್ರ , ಸಿಟಿವೃತ್ತ ರಾಜಾಜಿನಗರ
ಗ್ರಾಮಲೆಕ್ಕಿಗರು, ಅಟಲ್ ಜನಸ್ನೇಹಿ ಕೇಂದ್ರ , ಸಿಟಿವೃತ್ತ ಯಶವಂತಪುರ	ಅಟಲ್ ಜನಸ್ನೇಹಿ ಕೇಂದ್ರ , ಸಿಟಿವೃತ್ತ ಯಶವಂತಪುರ
ಗ್ರಾಮಲೆಕ್ಕಿಗರು, ಅಟಲ್ ಜನಸ್ನೇಹಿ ಕೇಂದ್ರ , ಸಿಟಿವೃತ್ತ ರಾಜಾಜಿನಗರ	ಅಟಲ್ ಜನಸ್ನೇಹಿ ಕೇಂದ್ರ , ಸಿಟಿವೃತ್ತ ರಾಜಾಜಿನಗರ

ಬೆಂಗಳೂರು ದಕ್ಷಿಣ ತಾಲ್ಲೂಕು:

ವಿಭಜಿಸಿ ಹೊಸದಾಗಿ ಸೃಜಿಸಿರುವ ರಾಜಸ್ವ ನಿರೀಕ್ಷಕರ ವೃತ್ತಗಳು.

1.ಹಾಲಿ ಕಾರ್ಯನಿರ್ವಹಿಸುತ್ತಿರುವ ಕೆಂಗೇರಿ ಹೋಬಳಿಯ ಕೆಂಗೇರಿ–1 ರಾಜಸ್ವ ನಿರೀಕ್ಷಕರ ವೃತ್ತವನ್ನು ವಿಭಜಿಸಿ ಕೆಂಗೇರಿ–4 (ರಾಜರಾಜೇಶ್ವರಿನಗರ) ಎಂಬ ವೃತ್ತವನ್ನು ಸೃಜಿಸಲಾಗಿದೆ.

1.ಕೆಂಗೇರಿ – 1 ಕೇಂದ್ರಸ್ಥಾನ – ಕೆಂಗೇರಿ ಒಳಪಡುವ ಗ್ರಾಮಲೆಕ್ಕಿಗರ ವೃತ್ತದ ಹೆಸರು		2.ಕೆಂಗೇರಿ–4 (ರಾಜರಾಜೇಶ್ವರಿನಗರ–ಹೊಸದಾಗಿ ಸೃಜಿಸಲಾದ ವೃತ್ತ) ಕೇಂದ್ರಸ್ಥಾನ – ಪಟ್ಟಣಗೆರೆ ಒಳಪಡುವ ಗ್ರಾಮಲೆಕ್ಕಿಗರ ವೃತ್ತದ ಹೆಸರು	
ಕ್ರ.ಸಂ.	**ವೃತ್ತದ ಹೆಸರು**	**ಕ್ರ.ಸಂ.**	**ವೃತ್ತದ ಹೆಸರು**
1	ಕೆಂಗೇರಿ	1	ಪಟ್ಟಣಗೆರೆ
2	ಸೂಲಿಕೆರೆ	2	ಹಲಗೆವಡೇರಹಳ್ಳಿ

2.ಹಾಲಿ ಕಾರ್ಯನಿರ್ವಹಿಸುತ್ತಿರುವ ಉತ್ತರಹಳ್ಳಿ ಹೋಬಳಿಯ ಬನಶಂಕರಿ ರಾಜಸ್ವ ನಿರೀಕ್ಷಕರ ವೃತ್ತವನ್ನು ವಿಭಜಿಸಿ ತ್ಯಾಗರಾಜನಗರ ಎಂಬ ವೃತ್ತವನ್ನು ಸೃಜಿಸಲಾಗಿದೆ.

1.ಬನಶಂಕರಿ ವೃತ್ತ ಕೇಂದ್ರಸ್ಥಾನ – ಬನಶಂಕರಿ ಒಳಪಡುವ ವಾರ್ಡ್‌ಗಳು/ಗ್ರಾಮಗಳು			2.ತ್ಯಾಗರಾಜನಗರ (ಹೊಸದಾಗಿ ಸೃಜಿಸಲಾದ ವೃತ್ತ) ಕೇಂದ್ರಸ್ಥಾನ – ತ್ಯಾಗರಾಜನಗರ ಒಳಪಡುವ ವಾರ್ಡ್‌ಗಳು/ಗ್ರಾಮಗಳು		
ಕ್ರ.ಸಂ.	**ವಾರ್ಡ್ ಸಂಖ್ಯೆ**	**ವಾರ್ಡ್ ಹೆಸರು**	**ಕ್ರ.ಸಂ.**	**ವಾರ್ಡ್ ಸಂಖ್ಯೆ**	**ವಾರ್ಡ್ ಹೆಸರು**
1	155	ಹನುಮಂತನಗರ	1	154	ತ್ಯಾಗರಾಜನಗರ
2	156	ಶ್ರೀನಗರ	2	166	ಕರಿಸಂದ್ರ
3	162	ಗಿರಿನಗರ	3	167	ಯಡಿಯೂರು
4	164	ಶ್ರೀನಿವಾಸನಗರ		182	ಪದ್ಮನಾಭನಗರ
5	165	ಗಣೇಶಮಂದಿರ			

3.ಹಾಲಿ ಕಾರ್ಯನಿರ್ವಹಿಸುತ್ತಿರುವ ಉತ್ತರಹಳ್ಳಿ ಹೋಬಳಿಯ ಉತ್ತರಹಳ್ಳಿ–1, ಉತ್ತರಹಳ್ಳಿ–2, ಉತ್ತರಹಳ್ಳಿ–3 ಮತ್ತು ಉತ್ತರಹಳ್ಳಿ–4 ವೃತ್ತವನ್ನು ಮರುವಿಂಗಡಿಸಿ ಉತ್ತರಹಳ್ಳಿ–5–ಚಿಕ್ಕಲ್ಲಸಂದ್ರ ಎಂಬ ರಾಜಸ್ವ ನಿರೀಕ್ಷಕರ ವೃತ್ತವನ್ನು ಸೃಜಿಸಲಾಗಿದೆ.

1.ಚಿಕ್ಕಲ್ಲಸಂದ್ರ ವೃತ್ತ (ಹೊಸದಾಗಿ ಸೃಜಿಸಲಾದ ವೃತ್ತ) ಕೇಂದ್ರಸ್ಥಾನ – ಚಿಕ್ಕಲ್ಲಸಂದ್ರ ಒಳಪಡುವ ಗ್ರಾಮಲೆಕ್ಕಿಗರ ವೃತ್ತಗಳು	
ಕ್ರ.ಸಂ.	ವೃತ್ತದ ಹೆಸರು
1	ಚಿಕ್ಕಲ್ಲಸಂದ್ರ (ಹೊಸದಾಗಿ ಸೃಜಿಸಲಾದ ವೃತ್ತ)
2	ಭೈರಸಂದ್ರ (ಹೊಸದಾಗಿ ಸೃಜಿಸಲಾದ ವೃತ್ತ)

ಮಂಜೂರು ಮಾಡಿರುವಂತಹ 3 ಗ್ರಾಮಲೆಕ್ಕಿಗರ ಹುದ್ದೆಗಳನ್ನು ಈ ಕೆಳಕಂಡಂತೆ ಸೃಜಿಸಲಾಗಿರುತ್ತದೆ.

1.ಹಾಲಿ ಕಾರ್ಯನಿರ್ವಹಿಸುತ್ತಿರುವ ಉತ್ತರಹಳ್ಳಿ ಹೋಬಳಿಯ ಸಾರಕ್ಕಿ ಗ್ರಾಮಲೆಕ್ಕಿಗರ ವೃತ್ತದಿಂದ ಮತ್ತು ಕತ್ರಿಗುಪ್ಪೆ ಗ್ರಾಮಲೆಕ್ಕಿಗರ ವೃತ್ತದಿಂದ ಗ್ರಾಮಗಳನ್ನು ವಿಭಜಿಸಿ ಭೈರಸಂದ್ರ ಎಂಬ ಹೊಸ ವೃತ್ತವನ್ನು ಸೃಜಿಸಲಾಗಿದೆ.

1ಸಾರಕ್ಕಿ ವೃತ್ತ ಒಳಪಡುವ ಗ್ರಾಮಗಳು		2. ಕತ್ರಿಗುಪ್ಪೆ ವೃತ್ತ ಒಳಪಡುವ ಗ್ರಾಮಗಳು		ಭೈರಸಂದ್ರ (ಹೊಸದಾಗಿ ಸೃಜಿಸಲಾದ ವೃತ್ತ) ಒಳಪಡುವ ಗ್ರಾಮಗಳು	
ಕ್ರ.ಸಂ.	ಗ್ರಾಮದ ಹೆಸರು	ಕ್ರ.ಸಂ.	ಗ್ರಾಮದ ಹೆಸರು	ಕ್ರ.ಸಂ.	ಗ್ರಾಮದ ಹೆಸರು
1	ಸಾರಕ್ಕಿ	1	ಕತ್ರಿಗುಪ್ಪೆ	1	ಕರೀಸಂದ್ರ
2	ಮಾರೇನಹಳ್ಳಿ	2	ಆವಲಹಳ್ಳಿ	2	ಗೋವಿನಾಯಕನಹಳ್ಳಿ
3	ಪುಟ್ಟೇನಹಳ್ಳಿ	3	ಇಟ್ಟಮಡು	3	ಭೈರಸಂದ್ರ
4	ಯಲಚೇನಹಳ್ಳಿ	4	ಹೊಸಕೆರೆಹಳ್ಳಿ	4	ಯಡಿಯೂರು
5	ದೊಡ್ಡಕಲ್ಲಸಂದ್ರ			5	ಯಡಿಯೂರು ನಾಗಸಂದ್ರ
6	ಚುಂಚಘಟ್ಟ				
7	ಜರಗನಹಳ್ಳಿ				
8	ಸಾರಕ್ಕಿಕೆರೆ				

2.ಹಾಲಿ ಕಾರ್ಯನಿರ್ವಹಿಸುತ್ತಿರುವ ಉತ್ತರಹಳ್ಳಿ ಹೋಬಳಿಯ ಉತ್ತರಹಳ್ಳಿ ಗ್ರಾಮಲೆಕ್ಕಿಗರ ವೃತ್ತದಿಂದ ಮತ್ತು ಸುಬ್ರಮಣ್ಯಪುರ ಗ್ರಾಮಲೆಕ್ಕಿಗರ ವೃತ್ತದಿಂದ ಗ್ರಾಮಗಳನ್ನು ವಿಭಜಿಸಿ ಚಿಕ್ಕಲ್ಲಸಂದ್ರ ಎಂಬ ಹೊಸ ವೃತ್ತವನ್ನು ಸೃಜಿಸಲಾಗಿದೆ.

1.ಉತ್ತರಹಳ್ಳಿ ವೃತ್ತ ಕೇಂದ್ರಸ್ಥಾನ – ಉತ್ತರಹಳ್ಳಿ ಒಳಪಡುವ ಗ್ರಾಮಗಳು		2. ಸುಬ್ರಮಣ್ಯಪುರ ವೃತ್ತ ಕೇಂದ್ರಸ್ಥಾನ– ಸುಬ್ರಮಣ್ಯಪುರ ಒಳಪಡುವ ಗ್ರಾಮಗಳು		ಚಿಕ್ಕಲ್ಲಸಂದ್ರ (ಹೊಸದಾಗಿ ಸೃಜಿಸಲಾದ ವೃತ್ತ) ಕೇಂದ್ರಸ್ಥಾನ – ಚಿಕ್ಕಲ್ಲಸಂದ್ರ ಒಳಪಡುವ ಗ್ರಾಮಗಳು	
ಕ್ರ.ಸಂ.	ಗ್ರಾಮದ ಹೆಸರು	ಕ್ರ.ಸಂ.	ಗ್ರಾಮದ ಹೆಸರು	ಕ್ರ.ಸಂ.	ಗ್ರಾಮದ ಹೆಸರು
1	ಉತ್ತರಹಳ್ಳಿ	1	ಸುಬ್ರಮಣ್ಯಪುರ	1	ಚಿಕ್ಕಲ್ಲಸಂದ್ರ
2	ಅರೇಹಳ್ಳಿ	2	ವಸಂತಪುರ	2	ಕದಿರೇನಹಳ್ಳಿ
3	ಚನ್ನಸಂದ್ರ	3	ಗುಬ್ಬಿಲಾಳ	3	ಬಿಕಾಸಿಪುರ
4	ವಡ್ಡರಪಾಳ್ಯ	4	ತುರಹಳ್ಳಿ		

3.ಹಾಲಿ ಕಾರ್ಯನಿರ್ವಹಿಸುತ್ತಿರುವ ಕೆಂಗೇರಿ ಹೋಬಳಿಯ ಪಟ್ಟಣಗೆರೆ ಗ್ರಾಮಲೆಕ್ಕಿಗರ ವೃತ್ತವನ್ನು ವಿಭಜಿಸಿ ಹಲಗೆವಡೇರಹಳ್ಳಿ ಎಂಬ ಹೊಸ ವೃತ್ತವನ್ನು ಸೃಜಿಸಲಾಗಿದೆ.

1.ಪಟ್ಟಣಗೆರೆ ವೃತ್ತ ಕೇಂದ್ರಸ್ಥಾನ – ಪಟ್ಟಣಗೆರೆ ಒಳಪಡುವ ಗ್ರಾಮಗಳು		2. ಹಲಗೆವಡೇರಹಳ್ಳಿ (ಹೊಸದಾಗಿ ಸೃಜಿಸಲಾದ ವೃತ್ತ) ಕೇಂದ್ರಸ್ಥಾನ – ಹಲಗೆವಡೇರಹಳ್ಳಿ ಒಳಪಡುವ ಗ್ರಾಮಗಳು	
ಕ್ರ.ಸಂ.	ಗ್ರಾಮದ ಹೆಸರು	ಕ್ರ.ಸಂ.	ಗ್ರಾಮದ ಹೆಸರು
1	ಪಟ್ಟಣಗೆರೆ	1	ನಾಯಂಡಹಳ್ಳಿ
2	ಮೈಲಸಂದ್ರ	2	ಪಂತರಪಾಳ್ಯ
3	ಗಾಣಕಲ್ಲು	3	ಹಲಗೆವಡೇರಹಳ್ಳಿ
4	ಕೆಂಚೇನಹಳಳಿ	4	ದೀವಟಿಗೆ ರಾಮನಹಳ್ಳಿ

ಆನೇಕಲ್ ತಾಲ್ಲೂಕು:

ವಿಭಜಿಸಬಹುದಾದ ರಾಜಸ್ವ ನಿರೀಕ್ಷಕರ ವೃತ್ತಗಳು.

1.ಹಾಲಿ ಕಾರ್ಯನಿರ್ವಹಿಸುತ್ತಿರುವ ಕಸಬಾ ಹೋಬಳಿಯ ಕಸಬಾ ರಾಜಸ್ವ ನಿರೀಕ್ಷಕರ ವೃತ್ತವನ್ನು ವಿಭಜಿಸಿ ಕಸಬಾ–1 ಮತ್ತು ಕಸಬಾ–2 ಎಂಬ ವೃತ್ತವನ್ನು ವಿಂಗಡಿಸಿ ಕಸಬಾ–2 ವೃತ್ತವನ್ನು ಹೊಸದಾಗಿ ಸೃಜಿಸಲಾಗಿದೆ.

1.ಕಸಬಾ–1 ಕೇಂದ್ರಸ್ಥಾನ – ಕಸಬಾ ಒಳಪಡುವ ಗ್ರಾಮಲೆಕ್ಕಿಗರ ವೃತ್ತದ ಹೆಸರು		2.ಕಸಬಾ–2 (ಮರಸೂರು ವೃತ್ತ –ಹೊಸದಾಗಿ ಸೃಜಿಸಲಾದ ವೃತ್ತ) ಕೇಂದ್ರಸ್ಥಾನ – ಮರಸೂರು ಒಳಪಡುವ ಗ್ರಾಮಲೆಕ್ಕಿಗರ ವೃತ್ತದ ಹೆಸರು	
ಕ್ರ.ಸಂ.	**ವೃತ್ತದ ಹೆಸರು**	**ಕ್ರ.ಸಂ.**	**ವೃತ್ತದ ಹೆಸರು**
1	ತಮ್ಮನಾಯಕನಹಳ್ಳಿ	1	ಮರಸೂರು
2	ವಣಕನಹಳ್ಳಿ	2	ದೊಡ್ಡಹಾಗಡೆ
3	ತೆಲಗರಹಳ್ಳಿ	3	ಬ್ಯಾಗಡದೇನಹಳ್ಳಿ
4	ಇಂಡ್ಲವಾಡಿ	4	ಮಡಿವಾಳ
5	ಸಮಂದೂರು	5	ಕರ್ಪೂರು
6	ಸುರಗಜಕ್ಕನಹಳ್ಳಿ	6	ರಾಚಮಾನಹಳ್ಳಿ
7	ಆನೇಕಲ್ ಗ್ರಾಮಾಂತರ (ಹೊಸ ಗ್ರಾ.ಲೆ.ವೃತ್ತ)		

2. ಹಾಲಿ ಕಾರ್ಯನಿರ್ವಹಿಸುತ್ತಿರುವ ಜಿಗಣಿ ಹೋಬಳಿಯ ಜಿಗಣಿ ರಾಜಸ್ವ ನಿರೀಕ್ಷಕರ ವೃತ್ತವನ್ನು ವಿಭಜಿಸಿ ಜಿಗಣಿ–1 ಮತ್ತು ಜಿಗಣಿ–2 ಎಂಬ ವೃತ್ತವನ್ನು ವಿಂಗಡಿಸಿ ಜಿಗಣಿ–2 ವೃತ್ತವನ್ನು ಹೊಸದಾಗಿ ಸೃಜಿಸಲಾಗಿದೆ.

1.ಜಿಗಣಿ–1 ಕೇಂದ್ರಸ್ಥಾನ – ಜಿಗಣಿ ಒಳಪಡುವ ವಾರ್ಡ್‌ಗಳು/ಗ್ರಾಮಗಳು		2. ಜಿಗಣಿ–2 (ಬನ್ನೇರುಘಟ್ಟ–ಹೊಸದಾಗಿ ಸೃಜಿಸಲಾದ ಕೇಂದ್ರಸ್ಥಾನ– ಬನ್ನೇರುಘಟ್ಟ ಒಳಪಡುವ ವಾರ್ಡ್‌ಗಳು/ಗ್ರಾಮಗಳು	
ಕ್ರ.ಸಂ.	**ವೃತ್ತದ ಹೆಸರು**	**ಕ್ರ.ಸಂ.**	**ವೃತ್ತದ ಹೆಸರು**
1	ಜಿಗಣಿ	1	ಬನ್ನೇರುಘಟ್ಟ
2	ಕ್ಯಾಲಸನಹಳ್ಳಿ	2	ಮಂಟಪ
3	ಹೆನ್ನಾಗರ	3	ಹುಲ್ಲಹಳ್ಳಿ
4	ರಾಜಾಪುರ	4	ರಾಗಿಹಳ್ಳಿ
5	ಹಾರಗದ್ದೆ	5	ಕೊಪ್ಪ
6	ನೊಸೆನೂರು	6	ಹುಲಿಮಂಗಲ
7	ಬುಕ್ಕಸಾಗರ	7	ಕಲ್ಕೆರೆ (ಹೊಸ ಗ್ರಾ.ಲೆ.ವೃತ್ತ)

3.ಹಾಲಿ ಕಾರ್ಯನಿರ್ವಹಿಸುತ್ತಿರುವ ಸರ್ಜಾಪುರ ಹೋಬಳಿಯ ಸರ್ಜಾಪುರ–1 ಮತ್ತು ಸರ್ಜಾಪುರ–2 ರಾಜಸ್ವ ನಿರೀಕ್ಷಕರ ವೃತ್ತವನ್ನು ಮರುವಿಂಗಡಿಸಿ ಸರ್ಜಾಪುರ–3 ಎಂಬ ಹೊಸ ವೃತ್ತವನ್ನು ಸೃಜಿಸಲಾಗಿದೆ.

1.ಸರ್ಜಾಪುರ–1 ಕೇಂದ್ರಸ್ಥಾನ – ಸರ್ಜಾಪುರ ಒಳಪಡುವ ವಾರ್ಡ್‌ಗಳು/ಗ್ರಾಮಗಳು		2. ಸರ್ಜಾಪುರ–2 (ಹುಸ್ಕೂರು ವೃತ್ತ) ಕೇಂದ್ರಸ್ಥಾನ – ಹುಸ್ಕೂರು ಒಳಪಡುವ ವಾರ್ಡ್‌ಗಳು/ಗ್ರಾಮಗಳು		ಸರ್ಜಾಪುರ –3 (ದೊಮ್ಮಸಂದ್ರ ವೃತ್ತ – ಹೊಸದಾಗಿ ಸೃಜಿಸಲಾದ ವೃತ್ತ) ಕೇಂದ್ರಸ್ಥಾನ –ದೊಮ್ಮಸಂದ್ರ ಒಳಪಡುವ ವಾರ್ಡ್‌ಗಳು/ಗ್ರಾಮಗಳು	
ಕ್ರ.ಸಂ.	**ವೃತ್ತದ ಹೆಸರು**	**ಕ್ರ.ಸಂ.**	**ವೃತ್ತದ ಹೆಸರು**	**ಕ್ರ.ಸಂ.**	**ವೃತ್ತದ ಹೆಸರು**
1	ವಿ.ಕಲ್ಲಹಳ್ಳಿ	1	ಹುಸ್ಕೂರು	1	ದೊಮ್ಮಸಂದ್ರ
2	ಮುಗಳೂರು	2	ಕೂಡ್ಲು	2	ಯಮರೆ
3	ಕೂಗೂರು	3	ನಾರಾಯಣಘಟ್ಟ	3	ಬಿಕ್ಕನಹಳ್ಳಿ
4	ಎಸ್.ಮೇಡಹಳ್ಳಿ	4	ಮುತ್ತನಲ್ಲೂರು	4	ನೆರಿಗಾ
5	ಹಂದೇನಹಳ್ಳಿ			5	ಕತ್ರಿಗುಪ್ಪೆ

ಮಂಜೂರು ಮಾಡಿರುವಂತಹ 3 ಗ್ರಾಮಲೆಕ್ಕಿಗರ ಹುದ್ದೆಗಳನ್ನು ಈ ಕೆಳಕಂಡಂತೆ ಸೃಜಿಸಲಾಗಿರುತ್ತದೆ.

1.ಹಾಲಿ ಕಾರ್ಯನಿರ್ವಹಿಸುತ್ತಿರುವ ಕಸಬಾ ಹೋಬಳಿಯ ತೆಲಗರಹಳ್ಳಿ ಗ್ರಾಮಲೆಕ್ಕಿಗರ ವೃತ್ತವನ್ನು ವಿಭಜಿಸಿ ಆನೇಕಲ್ ಗ್ರಾಮಾಂತರ ಎಂಬ ಹೊಸ ವೃತ್ತವನ್ನು ಸೃಜಿಸಲಾಗಿದೆ.

1.ತೆಲಗರಹಳ್ಳಿ ಕೇಂದ್ರಸ್ಥಾನ – ತೆಲಗರಹಳ್ಳಿ ಒಳಪಡುವ ಗ್ರಾಮಗಳ ಹೆಸರು		2. ಆನೇಕಲ್ ಗ್ರಾಮಾಂತರ(ಹೊಸದಾಗಿ ಸೃಜಿಸಲಾದ ವೃತ್ತ) ಕೇಂದ್ರಸ್ಥಾನ – ಆನೇಕಲ್ ಗ್ರಾಮಾಂತರ ಒಳಪಡುವ ಗ್ರಾಮಗಳ ಹೆಸರು	
ಕ್ರಸಂ.	**ಗ್ರಾಮದ ಹೆಸರು**	**ಕ್ರಸಂ.**	**ಗ್ರಾಮದ ಹೆಸರು**
1	ತೆಲಗರಹಳ್ಳಿ	1	ಆನೇಕಲ್ ಗ್ರಾಮಾಂತರ
2	ಸಿಂಗಸಂದ್ರ	2	ಸುಣವಾರ
3	ಪಟ್ಟಣಗೆರೆ ಗೊಲ್ಲಹಳ್ಳಿ	3	ಹೊಂಪಲಘಟ್ಟ
4	ಚೂಡೇನಹಳ್ಳಿ		

2.ಹಾಲಿ ಕಾರ್ಯನಿರ್ವಹಿಸುತ್ತಿರುವ ಜಿಗಣಿ ಹೋಬಳಿಯ ಬನ್ನೇರುಘಟ್ಟ ಗ್ರಾಮಲೆಕ್ಕಿಗರ ವೃತ್ತವನ್ನು ವಿಭಜಿಸಿ ಕಲ್ಕೆರೆ ಎಂಬ ಹೊಸ ವೃತ್ತವನ್ನು ಸೃಜಿಸಲಾಗಿದೆ.

1.ಬನ್ನೇರುಘಟ್ಟ ಕೇಂದ್ರಸ್ಥಾನ – ಬನ್ನೇರುಘಟ್ಟ ಒಳಪಡುವ ಗ್ರಾಮಗಳ ಹೆಸರು		2. ಕಲ್ಕೆರೆ (ಹೊಸದಾಗಿ ಸೃಜಿಸಲಾದ ವೃತ್ತ) ಕೇಂದ್ರಸ್ಥಾನ – ಕಲ್ಕೆರೆ ಒಳಪಡುವ ಗ್ರಾಮಗಳ ಹೆಸರು	
ಕ್ರಸಂ.	**ಗ್ರಾಮದ ಹೆಸರು**	**ಕ್ರಸಂ.**	**ಗ್ರಾಮದ ಹೆಸರು**
1	ಬನ್ನೇರುಘಟ್ಟ	1	ಕಲ್ಕೆರೆ
2	ಬನ್ನೇರುಘಟ್ಟ ಕಾವಲ್	2	ಭೂತಾನಹಳ್ಳಿ
3	ಗೊಲ್ಲಹಳ್ಳಿ	3	ಬಿಲ್ವಾರದಹಳ್ಳಿ
4	ಬೈರಪ್ಪನಹಳ್ಳಿ	4	ಕನ್ನನಾಯ್ಕನಅಗ್ರಹಾರ

3.ಹಾಲಿ ಕಾರ್ಯನಿರ್ವಹಿಸುತ್ತಿರುವ ಅತ್ತಿಬೆಲೆ ಹೋಬಳಿಯ ಹೆಬ್ಬಗೋಡಿ ಗ್ರಾಮಲೆಕ್ಕಿಗರ ವೃತ್ತವನ್ನು ವಿಭಜಿಸಿ ಕಮ್ಮಸಂದ್ರ ಎಂಬ ಹೊಸ ವೃತ್ತವನ್ನು ಸೃಜಿಸಲಾಗಿದೆ.

1.ಹೆಬ್ಬಗೋಡಿ ಕೇಂದ್ರಸ್ಥಾನ – ಹೆಬ್ಬಗೋಡಿ ಒಳಪಡುವ ಗ್ರಾಮಗಳ ಹೆಸರು		2. ಕಮ್ಮಸಂದ್ರ (ಹೊಸದಾಗಿ ಸೃಜಿಸಲಾದ ವೃತ್ತ) ಕೇಂದ್ರಸ್ಥಾನ – ಕಮ್ಮಸಂದ್ರ ಒಳಪಡುವ ಗ್ರಾಮಗಳ ಹೆಸರು	
ಕ್ರಸಂ.	**ಗ್ರಾಮದ ಹೆಸರು**	**ಕ್ರಸಂ.**	**ಗ್ರಾಮದ ಹೆಸರು**
1	ಹೆಬ್ಬಗೋಡಿ	1	ಕಮ್ಮಸಂದ್ರ
2	ಗೊಲ್ಲಹಳ್ಳಿ	2	ವಡ್ಡರಪಾಳ್ಯ
		3	ವೀರಸಂದ್ರ

ಬೆಂಗಳೂರು ಉತ್ತರ (ಅಪರ) ತಾಲ್ಲೂಕು:

ವಿಭಜಿಸಬಹುದಾದ ರಾಜಸ್ವ ನಿರೀಕ್ಷಕರ ವೃತ್ತಗಳು.

1.ಹಾಲಿ ಜಾಲ ಹೋಬಳಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ದೊಡ್ಡಜಾಲ ಮತ್ತು ಹುಣಸಮಾರನಹಳ್ಳಿ ವೃತ್ತಗಳನ್ನು ಮರುವಿಂಗಡಿಸಿ ಹೊಸದಾಗಿ ಜಾಲ–3 ನವರತ್ನ ಅಗ್ರಹಾರ ಎಂಬ ವೃತ್ತವನ್ನು ಸೃಜಿಸಲಾಗಿದೆ.

1.ಜಾಲ–1 (ದೊಡ್ಡಜಾಲ ವೃತ್ತ) ಕೇಂದ್ರಸ್ಥಾನ – ದೊಡ್ಡಜಾಲ ಒಳಪಡುವ ವಾರ್ಡ್‌ಗಳು/ಗ್ರಾಮಗಳು		2. ಜಾಲ–2(ಹುಣಸಮಾರನಹಳ್ಳಿ ವೃತ್ತ) ಕೇಂದ್ರಸ್ಥಾನ – ಹುಣಸಮಾರನಹಳ್ಳಿ ಒಳಪಡುವ ವಾರ್ಡ್‌ಗಳು/ಗ್ರಾಮಗಳು		3.ಜಾಲ –3 (ನವರತ್ನ ಅಗ್ರಹಾರ ವೃತ್ತ –ಹೊಸದಾಗಿ ಸೃಜಿಸಲಾದ ವೃತ್ತ) ಕೇಂದ್ರಸ್ಥಾನ – ತರಬನಹಳ್ಳಿ ಒಳಪಡುವ ವಾರ್ಡ್‌ಗಳು/ಗ್ರಾಮಗಳು	
ಕ್ರಸಂ.	**ವೃತ್ತದ ಹೆಸರು**	**ಕ್ರಸಂ.**	**ವೃತ್ತದ ಹೆಸರು**	**ಕ್ರಸಂ.**	**ವೃತ್ತದ ಹೆಸರು**
1	ದೊಡ್ಡಜಾಲ	1	ಬಾಗಲೂರು	1	ತರಹುಣಸೆ
2	ಬಂಡಿಕೊಡಿಗೇನಹಳ್ಳಿ	2	ಹುಣಸಮಾರನಹಳ್ಳಿ	2	ತರಬನಹಳ್ಳಿ
3	ಮಾರೇನಹಳ್ಳಿ	3	ಹುತ್ತನಹಳ್ಳಿ	3	ಬೆಟ್ಟಹಲಸೂರು
4	ಸಿಂಗಹಳ್ಳಿ				

2.ಬೆಂಗಳೂರು ಉತ್ತರ (ಅಪರ) ತಾಲ್ಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿರುವ 6 ಸಿಟಿ ರಾಜಸ್ವ ನಿರೀಕ್ಷಕರ ವೃತ್ತಗಳನ್ನು ಮರುವಿಂಗಡಿಸಿ 8 ವೃತ್ತಗಳಾಗಿ ಪರಿವರ್ತಿಸಲಾಗಿದೆ. ಅದರಂತೆ ಹೊಸದಾಗಿ 2 ರಾಜಸ್ವ ನಿರೀಕ್ಷಕರ ವೃತ್ತಗಳಾದ ಸುಧಾಮನಗರ ಮತ್ತು ಜಯಮಹಲ್ ವೃತ್ತಗಳನ್ನು ಸೃಜಿಸಲಾಗಿದೆ.

1.ಸಿಟಿ ಸರ್ಕಲ್ ಸುಧಾಮನಗರ ವೃತ್ತ (ಹೊಸದಾಗಿ ಸೃಜಿಸಲಾದ ವೃತ್ತ) ಕೇಂದ್ರಸ್ಥಾನ – ಸುಧಾಮನಗರ ಒಳಪಡುವ ವಾರ್ಡ್‌ಗಳು/ಗ್ರಾಮಗಳು			2.ಸಿಟಿ ಸರ್ಕಲ್ ಜಯಮಹಲ್ (ಹೊಸದಾಗಿ ಸೃಜಿಸಲಾದ ವೃತ್ತ) ಕೇಂದ್ರಸ್ಥಾನ – ಜಯಮಹಲ್ ಒಳಪಡುವ ವಾರ್ಡ್‌ಗಳು/ಗ್ರಾಮಗಳು			3.ಸಿಟಿ ಸರ್ಕಲ್ ಮಾರುತಿಸೇವಾನಗರ ಮರುವಿಂಗಡಣೆಯಾಗಿರುವಂತೆ ಒಳಪಡುವ ವಾರ್ಡ್‌ಗಳು/ಗ್ರಾಮಗಳು		
ಕ್ರ ಸಂ.	ವಾರ್ಡ್ ಸಂಖ್ಯೆ	ವಾರ್ಡ್ ಹೆಸರು	ಕ್ರ. ಸಂ.	ವಾರ್ಡ್ ಸಂಖ್ಯೆ	ವಾರ್ಡ್ ಹೆಸರು	ಕ್ರ. ಸಂ.	ವಾರ್ಡ್ ಸಂಖ್ಯೆ	ವಾರ್ಡ್ ಹೆಸರು
1	145	ಹೊಂಬೇಗೌಡನಗರ	1	63	ಜಯಮಹಲ್	1	59	ಮಾರುತಿಸೇವಾನಗರ
2	118	ಸುಧಾಮನಗರ	2	62	ರಾಮಸ್ವಾಮಿಪಾಳ್ಯ	2	78	ಪುಲಕೇಶಿನಗರ
3	119	ಧರ್ಮರಾಯಸ್ವಾಮಿ ದೇವಸ್ಥಾನ	3	61	ಎಸ್.ಕೆ.ಗಾರ್ಡನ್	3	79	ಸರ್ವಜ್ಞನಗರ
4	110	ಸಂಪಂಗಿರಾಮನಗರ	4				60	ಸಗಾಯಪುರಂ
5			5				28	ಕಮ್ಮನಹಳ್ಳಿ

4.ಸಿಟಿ ಸರ್ಕಲ್ ಶಿವಾಜಿನಗರ ವೃತ್ತ ಮರುವಿಂಗಡಣೆಯಾಗಿರುವಂತೆ ಒಳಪಡುವ ವಾರ್ಡ್‌ಗಳು/ಗ್ರಾಮಗಳು			5.ಸಿಟಿ ಸರ್ಕಲ್ ಸದಾಶಿವನಗರ ವೃತ್ತ ಮರುವಿಂಗಡಣೆಯಾಗಿರುವಂತೆ ಒಳಪಡುವ ವಾರ್ಡ್‌ಗಳು/ಗ್ರಾಮಗಳು			6.ಸಿಟಿ ಸರ್ಕಲ್ ಶಾಂತಿನಗರ ವೃತ್ತ ಮರುವಿಂಗಡಣೆಯಾಗಿರುವಂತೆ ಒಳಪಡುವ ವಾರ್ಡ್‌ಗಳು/ಗ್ರಾಮಗಳು		
ಕ್ರ ಸಂ.	ವಾರ್ಡ್ ಸಂಖ್ಯೆ	ವಾರ್ಡ್ ಹೆಸರು	ಕ್ರ. ಸಂ.	ವಾರ್ಡ್ ಸಂಖ್ಯೆ	ವಾರ್ಡ್ ಹೆಸರು	ಕ್ರ. ಸಂ.	ವಾರ್ಡ್ ಸಂಖ್ಯೆ	ವಾರ್ಡ್ ಹೆಸರು
1	92	ಶಿವಾಜಿನಗರ	1	20	ಗಂಗಾನಗರ	1	117	ಶಾಂತಿನಗರ
2	91	ಭಾರತಿನಗರ	2	34	ಗಂಗೇನಹಳ್ಳಿ	2	111	ಶಾಂತಲನಗರ
			3	33	ರೆಹಮತ್‌ನಗರ	3	114	ಅಗರಂ
			4	64	ಪ್ಯಾಲೇಸ್‌ಗುಟ್ಟಹಳ್ಳಿ	4	115	ವನ್ನಾರಪೇಟೆ
						5	116	ನೀಲಸಂದ್ರ

7.ಸಿಟಿ ಸರ್ಕಲ್ ಬಸವನಗುಡಿ ವೃತ್ತ ಮರುವಿಂಗಡಣೆಯಾಗಿರುವಂತೆ ಒಳಪಡುವ ವಾರ್ಡ್‌ಗಳು/ಗ್ರಾಮಗಳು			8.ಸಿಟಿ ಸರ್ಕಲ್ ಇಂದಿರಾನಗರ ವೃತ್ತ ಮರುವಿಂಗಡಣೆ ಯಾಗಿರುವಂತೆ ಒಳಪಡುವ ವಾರ್ಡ್‌ಗಳು/ಗ್ರಾಮಗಳು		
ಕ್ರ ಸಂ.	ವಾರ್ಡ್ ಸಂಖ್ಯೆ	ವಾರ್ಡ್ ಹೆಸರು	ಕ್ರ. ಸಂ.	ವಾರ್ಡ್ ಸಂಖ್ಯೆ	ವಾರ್ಡ್ ಹೆಸರು
1	169	ಬಸವನಗುಡಿ	1	112	ದೊಮ್ಮಲೂರು
2	153	ಜಯನಗರ (ಭೈರಸಂದ್ರ)	2	80	ಹೊಯ್ಸಳನಗರ
3	144	ಸಿದ್ದಾಪುರ	3	89	ಜೋಗುಪಾಳ್ಯ
4	143	ವಿ.ವಿ.ಪುರಂ			

ಮಂಜೂರು ಮಾಡಿರುವಂತಹ 3 ಗ್ರಾಮಲೆಕ್ಕಿಗರ ಹುದ್ದೆಗಳನ್ನು ಈ ಕೆಳಕಂಡಂತೆ ಸೃಜಿಸಲಾಗಿರುತ್ತದೆ.

ಸೃಜಿಸಲಾಗಿರುವ ಗ್ರಾಮಲೆಕ್ಕಿಗರ ಹುದ್ದೆ	ಕಾರ್ಯನಿರ್ವಹಿಸಬೇಕಾದ ಸ್ಥಳ
ಗ್ರಾಮಲೆಕ್ಕಿಗರು, ಅಟಲ್ ಜನಸ್ನೇಹಿ ಕೇಂದ್ರ , ಸಿಟಿವೃತ್ತ	ಅಟಲ್ ಜನಸ್ನೇಹಿ ಕೇಂದ್ರ , ಸಿಟಿವೃತ್ತ ಹಮೀದ್ ಷಾ ಕಾಂಪ್ಲೆಕ್ಸ್, ಕಬ್ಬನ್‌ಪೇಟೆ ಮುಖ್ಯರಸ್ತೆ.
ಗ್ರಾಮಲೆಕ್ಕಿಗರು, ಅಟಲ್ ಜನಸ್ನೇಹಿ ಕೇಂದ್ರ , ಸಿಟಿವೃತ್ತ ರಾಮಚಂದ್ರಪುರ	ಅಟಲ್ ಜನಸ್ನೇಹಿ ಕೇಂದ್ರ , ಸಿಟಿವೃತ್ತ ರಾಮಚಂದ್ರಪುರ
ಗ್ರಾಮಲೆಕ್ಕಿಗರು, ಅಟಲ್ ಜನಸ್ನೇಹಿ ಕೇಂದ್ರ , ಸಿಟಿವೃತ್ತ	ಅಟಲ್ ಜನಸ್ನೇಹಿ ಕೇಂದ್ರ , ಸಿಟಿವೃತ್ತ ಹಮೀದ್ ಷಾ ಕಾಂಪ್ಲೆಕ್ಸ್, ಕಬ್ಬನ್‌ಪೇಟೆ ಮುಖ್ಯರಸ್ತೆ.

ಬೆಂಗಳೂರು ಪೂರ್ವ ತಾಲ್ಲೂಕು:

ವಿಭಜಿಸಿ ಹೊಸದಾಗಿ ಸೃಜಿಸಿರುವ ರಾಜಸ್ವ ನಿರೀಕ್ಷಕರ ವೃತ್ತಗಳು.

1.ಹಾಲಿ ಕಾರ್ಯನಿರ್ವಹಿಸುತ್ತಿರುವ ಕೆ.ಆರ್.ಪುರ ಹೋಬಳಿಯ ಕೆ.ಆರ್.ಪುರ–1 ರಾಜಸ್ವ ನಿರೀಕ್ಷಕರ ವೃತ್ತವನ್ನು ವಿಭಜಿಸಿ ಹೊಸದಾಗಿ ಮಹದೇವಪುರ ಎಂಬ ವೃತ್ತವನ್ನು ಸೃಜಿಸಲಾಗಿದೆ.

1.ಕೆ.ಆರ್.ಪುರ – 1 ಕೇಂದ್ರಸ್ಥಾನ – ಕೆ.ಆರ್.ಪುರ ಒಳಪಡುವ ಗ್ರಾಮಲೆಕ್ಕಿಗರ ವೃತ್ತಗಳು		2. ಮಹದೇವಪುರ (ಹೊಸದಾಗಿ ಸೃಜಿಸಲಾದ ವೃತ್ತ) ಕೇಂದ್ರಸ್ಥಾನ – ಮಹದೇವಪುರ ಒಳಪಡುವ ಗ್ರಾಮಲಕ್ಕಿಗರ ವೃತ್ತಗಳು	
ಕ್ರ.ಸಂ.	**ವೃತ್ತದ ಹೆಸರು**	**ಕ್ರ.ಸಂ.**	**ವೃತ್ತದ ಹೆಸರು**
1	ಕೃಷ್ಣರಾಜಪುರ ವೃತ್ತ	1	ವಿಜಿನಾಪುರ
2	ಬಾಣಸವಾಡಿ	2	ಬೈಯ್ಯಪ್ಪನಹಳ್ಳಿ
		3	ಬಿ.ನಾರಾಯಣಪುರ

2.ಹಾಲಿ ಕಾರ್ಯನಿರ್ವಹಿಸುತ್ತಿರುವ ವರ್ತೂರು ಹೋಬಳಿಯ ವರ್ತೂರು–1 ರಾಜಸ್ವ ನಿರೀಕ್ಷಕರ ವೃತ್ತವನ್ನು ವಿಭಜಿಸಿ ಹೊಸದಾಗಿ ವರ್ತೂರು–3 ಮಾರತ್‌ಹಳ್ಳಿ ವೃತ್ತ ಎಂಬ ವೃತ್ತವನ್ನು ಸೃಜಿಸಲಾಗಿದೆ.

1.ವರ್ತೂರು – 1 ಕೇಂದ್ರಸ್ಥಾನ – ವರ್ತೂರು ಒಳಪಡುವ ಗ್ರಾಮಲೆಕ್ಕಿಗರ ವೃತ್ತಗಳು		2.ಮಾರತ್‌ಹಳ್ಳಿ (ಹೊಸದಾಗಿ ಸೃಜಿಸಲಾದ ವೃತ್ತ) ಕೇಂದ್ರಸ್ಥಾನ – ಮಾರತ್‌ಹಳ್ಳಿ ಒಳಪಡುವ ಗ್ರಾಮಲಕ್ಕಿಗರ ವೃತ್ತಗಳು	
ಕ್ರ.ಸಂ.	**ವೃತ್ತದ ಹೆಸರು**	**ಕ್ರ.ಸಂ.**	**ವೃತ್ತದ ಹೆಸರು**
1	ಗುಂಜೂರು	1	ಮಾರತ್‌ಹಳ್ಳಿ (ಹೊಸದಾಗಿ ಸೃಜಿಸಲಾದ ಗ್ರಾ.ಲೆ.ವೃತ್ತ)
2	ರಾಮಗೊಂಡನಹಳ್ಳಿ	2	ಹೆಚ್.ಎ.ಎಸ್.ಬಿ.
3	ವರ್ತೂರು		
4	ಸೋರಹುಣಸೆ		

2.ಹಾಲಿ ಕಾರ್ಯನಿರ್ವಹಿಸುತ್ತಿರುವ ಬಿದರಹಳ್ಳಿ ಹೋಬಳಿಯ ಬಿದರಹಳ್ಳಿ–2 ರಾಜಸ್ವ ನಿರೀಕ್ಷಕರ ವೃತ್ತವನ್ನು ವಿಭಜಿಸಿ ಹೊಸದಾಗಿ ಬಿದರಹಳ್ಳಿ–3 ದೊಡ್ಡಗುಬ್ಬಿ ವೃತ್ತ ಎಂಬ ವೃತ್ತವನ್ನು ಸೃಜಿಸಲಾಗಿದೆ.

1.ಬಿದರಹಳ್ಳಿ – 2 (ಬಿದರಹಳ್ಳಿ ವೃತ್ತ) ಕೇಂದ್ರಸ್ಥಾನ – ಬಿದರಹಳ್ಳಿ ಒಳಪಡುವ ಗ್ರಾಮಲೆಕ್ಕಿಗರ ವೃತ್ತಗಳು		2.ಬಿದರಹಳ್ಳಿ–3 ದೊಡ್ಡಗುಬ್ಬಿ ವೃತ್ತ (ಹೊಸದಾಗಿ ಸೃಜಿಸಲಾದ ವೃತ್ತ) ಕೇಂದ್ರಸ್ಥಾನ – ದೊಡ್ಡಗುಬ್ಬಿ ಒಳಪಡುವ ಗ್ರಾಮಲಕ್ಕಿಗರ ವೃತ್ತಗಳು	
ಕ್ರ.ಸಂ.	**ವೃತ್ತದ ಹೆಸರು**	**ಕ್ರ.ಸಂ.**	**ವೃತ್ತದ ಹೆಸರು**
1	ಹಿರಂಡಹಳ್ಳಿ	1	ಕಣ್ಣೂರು
2	ಬಿದರಹಳ್ಳಿ	2	ರಾಂಪುರ
3	ಮಂಡೂರು	3	ದೊಡ್ಡಗುಬ್ಬಿ
4	ಮೇಡಹಳ್ಳಿ		

ಮಂಜೂರು ಮಾಡಿರುವಂತಹ 3 ಗ್ರಾಮಲೆಕ್ಕಿಗರ ಹುದ್ದೆಗಳನ್ನು ಈ ಕೆಳಕಂಡಂತೆ ಸೃಜಿಸಲಾಗಿರುತ್ತದೆ.

1.ಹಾಲಿ ಕಾರ್ಯನಿರ್ವಹಿಸುತ್ತಿರುವ ವರ್ತೂರು ಹೋಬಳಿಯ ಹೆಚ್.ಎ.ಎಸ್.ಬಿ. ಗ್ರಾಮಲೆಕ್ಕಿಗರ ವೃತ್ತವನ್ನು ವಿಭಜಿಸಿ ಮಾರತ್‌ಹಳ್ಳಿ ಎಂಬ ಹೊಸ ವೃತ್ತವನ್ನು ಸೃಜಿಸಲಾಗಿದೆ.

1.ಹೆಚ್.ಎ.ಬಿ.ಎಸ್. ವೃತ್ತ ಕೇಂದ್ರಸ್ಥಾನ – ಹೆಚ್.ಎ.ಬಿ.ಎಸ್ ಒಳಪಡುವ ಗ್ರಾಮಗಳ ಹೆಸರು		2. ಮಾರತ್‌ಹಳ್ಳಿ ವೃತ್ತ (ಹೊಸದಾಗಿ ಸೃಜಿಸಲಾದ ವೃತ್ತ) ಕೇಂದ್ರಸ್ಥಾನ – ಮಾರತ್‌ಹಳ್ಳಿ ಒಳಪಡುವ ಗ್ರಾಮಗಳ ಹೆಸರು	
ಕ್ರ.ಸಂ.	**ಗ್ರಾಮದ ಹೆಸರು**	**ಕ್ರ.ಸಂ.**	**ಗ್ರಾಮದ ಹೆಸರು**
1	ಕೋಡಿಹಳ್ಳಿ	1	ಮಾರತ್‌ಹಳ್ಳಿ
2	ಕೋನೇನಅಗ್ರಹಾರ	2	ಕೆಂಪಾಪುರ
3	ಚಲ್ಲಘಟ್ಟ	3	ಬೇಲೂರು ನಾಗಸಂದ್ರ

4	ವಿಭೂತಿಪುರ	4	ಯಮಲೂರು
5	ಭೈರಸಂದ್ರ	5	ತಿಪ್ಪಸಂದ್ರ ಮನವರ್ತೆಕಾವಲ್
6	ಕಗ್ಗದಾಸನಪುರ	6	ದೊಡ್ಡನೆಕ್ಕುಂದಿ
7	ತಿಪ್ಪಸಂದ್ರ	7	ಬೇಲೂರು

2.ಹಾಲಿ ಕಾರ್ಯನಿರ್ವಹಿಸುತ್ತಿರುವ ಕೆ.ಆರ್.ಪುರ ಹೋಬಳಿಯ ಕೆ.ಆರ್.ಪುರ ಗ್ರಾಮಲೆಕ್ಕಿಗರ ವೃತ್ತವನ್ನು ವಿಭಜಿಸಿ ಬಸವನಪುರ ಎಂಬ ಹೊಸ ವೃತ್ತವನ್ನು ಸೃಜಿಸಲಾಗಿದೆ.

1.ಕೆ.ಆರ್.ಪುರ ವೃತ್ತ ಕೇಂದ್ರಸ್ಥಾನ – ಕೆ.ಆರ್.ಪುರ ಒಳಪಡುವ ಗ್ರಾಮಗಳ ಹೆಸರು		2. ಬಸವನಪುರ ವೃತ್ತ (ಹೊಸದಾಗಿ ಸೃಜಿಸಲಾದ ವೃತ್ತ) ಕೇಂದ್ರಸ್ಥಾನ – ಬಸವನಪುರ ಒಳಪಡುವ ಗ್ರಾಮಗಳ ಹೆಸರು	
ಕ್ರ.ಸಂ.	**ಗ್ರಾಮದ ಹೆಸರು**	**ಕ್ರ.ಸಂ.**	**ಗ್ರಾಮದ ಹೆಸರು**
1	ಕೌದೇನಹಳ್ಳಿ	1	ಬಸವನಪುರ
2	ಸಣ್ಣತಮ್ಮನಹಳ್ಳಿ	2	ಶೀಗೇಹಳ್ಳಿ
3	ಕೃಷ್ಣರಾಜಪುರ	3	ದೇವಸಂದ್ರ

3.ಹಾಲಿ ಕಾರ್ಯನಿರ್ವಹಿಸುತ್ತಿರುವ ವರ್ತೂರು ಹೋಬಳಿಯ ದೊಡ್ಡಕನ್ನಲ್ಲಿ ಗ್ರಾಮಲೆಕ್ಕಿಗರ ವೃತ್ತವನ್ನು ವಿಭಜಿಸಿ ಕೈಕೊಂಡ್ರಹಳ್ಳಿ ಎಂಬ ಹೊಸ ವೃತ್ತವನ್ನು ಸೃಜಿಸಲಾಗಿದೆ.

1.ದೊಡ್ಡಕನ್ನಲ್ಲಿ ಕೇಂದ್ರಸ್ಥಾನ – ದೊಡ್ಡಕನ್ನಲ್ಲಿ ಒಳಪಡುವ ಗ್ರಾಮಗಳ ಹೆಸರು		2. ಕೈಕೊಂಡ್ರಹಳ್ಳಿ (ಹೊಸದಾಗಿ ಸೃಜಿಸಲಾದ ವೃತ್ತ) ಕೇಂದ್ರಸ್ಥಾನ – ಕೈಕೊಂಡ್ರಹಳ್ಳಿ ಒಳಪಡುವ ಗ್ರಾಮಗಳ ಹೆಸರು	
ಕ್ರ.ಸಂ.	**ಗ್ರಾಮದ ಹೆಸರು**	**ಕ್ರ.ಸಂ.**	**ಗ್ರಾಮದ ಹೆಸರು**
1	ದೊಡ್ಡಕನ್ನಲ್ಲಿ	1	ಕೈಗೊಂಡ್ರಹಳ್ಳಿ
2	ಚಿಕ್ಕಕನ್ನಲ್ಲಿ	2	ಕಸವನಹಳ್ಳಿ
3	ಹಾಲನಾಯಕನಹಳ್ಳಿ	3	ಜುನ್ನಸಂದ್ರ
4	ಚಿಕ್ಕನಾಯಕನಹಳ್ಳಿ		
5	ಹಾಡೋಸಿದ್ದಾಪುರ		

ಜಿಲ್ಲಾಧಿಕಾರಿಗಳು,
ಬೆಂಗಳೂರು ನಗರ ಜಿಲ್ಲೆ,
ಬೆಂಗಳೂರು.

PR.2451

ಸಹಕಾರ ಇಲಾಖೆ

ಸಹಕಾರ ಸಂಘಗಳ ಉಪ ನಿಬಂಧಕರು, ದಾವಣಗೆರೆ ಜಿಲ್ಲೆ, ಜಿಲ್ಲಾಡಳಿತ ಭವನ, ಎರಡನೇ ಮಹಡಿ, ಕೊಠಡಿ ಸಂ:52, 53, ಕರೂರು ಕೈಗಾರಿಕಾ ಪ್ರದೇಶ, ಪಿ.ಬಿ. ರಸ್ತೆ, ದಾವಣಗೆರೆ. ಇವರ ಕಾರ್ಯಾಲಯ.

ವಿಷಯ: ಸಮಾಪನೆಗೊಂಡಿರುವ ಸರ್ಕಾರಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿ, ದಾವಣಗೆರೆ, ಇದನ್ನು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 72(3) ರನ್ವಯ ಪುನ:ಶ್ಚೇತನಗೊಳಿಸುವ ಬಗ್ಗೆ.

ಉಲ್ಲೇಖ: 1) ಈ ಕಚೇರಿ ಪತ್ರ ಸಮ ಸಂಖ್ಯೆ:ಡಿಆರ್/ಡಿವಿಜಿ/ಎಲ್‌ಕ್ಯೂಡಿ/ಸಿಆರ್–50/2005–06 ದಿ:16–03–2006 ಮತ್ತು ದಿ: 02–08–2012.

2) ಸಹಕಾರ ಸಂಘಗಳ ಸಹಾಯಕ ನಿಬಂಧಕರು, ದಾವಣಗೆರೆ ಇವರ ಪತ್ರ ದಿ:29–07–2013.

ಪ್ರಸ್ತಾವನೆ:–

ಪ್ರಸ್ತುತ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, ವಿಷಯ ಸೂಚಿತ ಸಂಘವು ಕಳೆದ ಹಲವಾರು ವರ್ಷಗಳಿಂದ ಸ್ಥಗಿತಗೊಂಡಿದ್ದ ಕಾರಣ ಉಲ್ಲೇಖ (1)ರ ಆದೇಶದ ರೀತ್ಯಾ ಸಮಾಪನೆಗೊಳಿಸಿ ಸಹಕಾರ ಸಂಘಗಳ ನಿರೀಕ್ಷಕರು, 2ನೇ ವೃತ್ತ, ದಾವಣಗೆರೆ, ಇವರನ್ನು ಸಮಾಪನಾಧಿಕಾರಿಯನ್ನಾಗಿ ನೇಮಕ ಮಾಡಲಾಗಿತ್ತು. ನಂತರ ದಿ:02–08–2012ರ ಈ ಕಚೇರಿ ಆದೇಶದಲ್ಲಿ ಶ್ರೀ.ಎನ್.ಜಿ. ರುದ್ರಪ್ಪ, ಸಹಕಾರ ಸಂಘಗಳ ಹಿರಿಯ ನಿರೀಕ್ಷಕರು, ಸಹಕಾರ ಸಂಘಗಳ ಉಪ ನಿಬಂಧಕರ ಕಚೇರಿ, ದಾವಣಗೆರೆ, ಇವರನ್ನು ಸಮಾಪನಾಧಿಕಾರಿಯನ್ನಾಗಿ ನೇಮಿಸಲಾಯಿತು. ಸಮಾಪನಾಧಿಕಾರಿಗಳು ಸಮಾಪನಾ ಕಾರ್ಯವನ್ನು ಪೂರ್ಣಗೊಳಿಸುವ ಪೂರ್ವದಲ್ಲಿ, ಸಂಘದ ಸದಸ್ಯರು ದಿ:23–06–2013 ರಂದು ಸಭೆ ಸೇರಿ ಸಂಘವನ್ನು ಪುನ:ಶ್ಚೇತನ ಗೊಳಿಸಿಕೊಂಡು ಕಾರ್ಯನಿರ್ವಹಿಸಲು ತೀರ್ಮಾನಿಸಿ ಅದರಂತೆ ಮೂರು ವರ್ಷಗಳ ಕ್ರಿಯಾಯೋಜನೆಯನ್ನು ರೂಪಿಸಿಕೊಂಡಿರುತ್ತಾರೆ. ಇದೇ ಅಂಶವನ್ನು ಸಹಕಾರ ಸಂಘಗಳ ಸಹಾಯಕ ನಿಬಂಧಕರು ದಾವಣಗೆರೆ ಇವರು, ಉಲ್ಲೇಖ 2 ರ ಪತ್ರದಲ್ಲಿ ಶಿಫಾರಸ್ಸು ಮಾಡಿರುತ್ತಾರೆ. ದಿ:23–06–2013ರ ಸಭೆಯಲ್ಲಿ

ಕೈಗೊಂಡಿರುವ ನಿರ್ಣಯದಂತೆ ಸಂಘವು ಕಾರ್ಯನಿರ್ವಹಿಸುತ್ತಿರುವ ಸ್ಥಳದ ವಿವರ ಸಂಘದ ನಾಮಫಲಕ ಇಲಾಖೆಗೆ ಸಲ್ಲಿಸಬೇಕಾದ ಮಾಹಿತಿಗಳನ್ನು ಸಹಕಾರ ಸಂಘಗಳ ನಿರೀಕ್ಷಕರು, 2ನೇ ವೃತ್ತ, ದಾವಣಗೆರೆ, ಇವರ ಮೂಲಕ ಸಲ್ಲಿಸುವಂತೆ ಸೂಚಿಸುತ್ತಾ ಮತ್ತು ಸಂಘದ ಸದಸ್ಯರು ಹಾಕಿಕೊಂಡಿರುವ ಕ್ರಿಯಾ ಯೋಜನೆ ಪ್ರಕಾರ ಪ್ರತಿ ಆರು ತಿಂಗಳಿಗೊಮ್ಮೆ ಗುರಿ ಸಾಧನೆಯ ಪ್ರಗತಿ ತ:ಖ್ತೆಯನ್ನು ಈ ಕಚೇರಿಗೂ ಹಾಗೂ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ದಾವಣಗೆರೆ ಇವರ ಕಚೇರಿಗೂ ಸಲ್ಲಿಸುವಂತೆ ಸೂಚಿಸುತ್ತಾ ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಪರಿಗಣಿಸಿ ಸಂಘವನ್ನು ಪುನ:ಶ್ಚೇತನಗೊಳಿಸಲು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಆದೇಶ

ನಂ:ಡಿಆರ್/ಡಿವಿಜಿ/ಪುನ:ಶ್ಚೇತನ/ಸಿಆರ್–50/2005–06, ದಿನಾಂಕ:19–11–2013

ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 72(3) ಹಾಗೂ ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ:ಸಿಓ:139: ಸಿಎಲ್ಎಮ್:2010 ದಿನಾಂಕ:17–02–2011ರನ್ವಯ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಎಸ್.ಎಚ್. ಬೆಲ್ಲದ್, ಕೆ.ಸಿ.ಎಸ್. ಸಹಕಾರ ಸಂಘಗಳ ಉಪ ನಿಬಂಧಕರು, ದಾವಣಗೆರೆ ಜಿಲ್ಲೆ, ದಾವಣಗೆರೆ, ಆದ ನಾನು ಸಮಾಪನೆಗೊಂಡಿರುವ ಸರ್ಕಾರಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿ, ದಾವಣಗೆರೆ, ಇದರ ಉಲ್ಲೇಖ (1)ರ ಸಮಾಪನಾ ಆದೇಶವನ್ನು ರದ್ದುಗೊಳಿಸಿ ಈ ಸಂಘವನ್ನು ಮುಂದುವರಿಸಿ ಕೊಂಡು ಹೋಗಲು ಅವಕಾಶ ನೀಡುತ್ತಾ ಈ ಮೂಲಕ ಸಂಘವನ್ನು ಈ ಕೆಳಕಂಡ ಷರತ್ತುಗಳಿಗೊಳಪಡಿಸಿ ಪುನ:ಶ್ಚೇತನಕ್ಕಾಗಿ ಆದೇಶಿಸಿರುತ್ತೇನೆ.

ಷರತ್ತುಗಳು

1) ಪುನ:ಶ್ಚೇತನಗೊಂಡ 6ತಿಂಗಳ ಒಳಗಾಗಿ ಲೆಕ್ಕಪರಿಶೋಧನೆ ಮಾಡಿಸಿ ಸದರಿ ವರದಿಯನ್ನು ಈ ಕಚೇರಿಗೆ ಸಲ್ಲಿಸುವುದು.

2) ಕ್ರಿಯಾ ಯೋಜನಾ ರೀತ್ಯಾ ಕಾರ್ಯಕ್ರಮ ಹಮ್ಮಿಕೊಂಡು ಪ್ರಗತಿ ಸಾಧಿಸುವುದು.

3) ಡಿ.ಡಿ.ಸಿ.ಸಿ. ಬ್ಯಾಂಕ್ ನೊಂದಿಗೆ ವ್ಯವಹಾರ ಮಾಡತಕ್ಕದ್ದು.

ಒಂದು ವೇಳೆ ಷರತ್ತಿಗನುಗುಣವಾಗಿ 6 ತಿಂಗಳ ನಂತರ ಯಾವುದೇ ಪ್ರಗತಿ ಸಾಧಿಸದಿದ್ದಲ್ಲಿ ಸಂಘವನ್ನು ನೇರವಾಗಿ ಸಮಾಪನೆಗೊಳಿಸಲಾಗುವುದು.

ಸಹಕಾರ ಸಂಘಗಳ ಸಹಾಯಕ ನಿಬಂಧಕರು, ದಾವಣಗೆರೆ ಇವರು ಸಂಘದ ಚುನಾವಣಾ ಕಾರ್ಯವನ್ನು ಜರುಗಿಸಲು ಚುನಾವಣಾ ಆಯೋಗಕ್ಕೆ ವರದಿ ಮಾಡಲು ಆದೇಶಿಸಿದೆ.

ಈ ಆದೇಶವನ್ನು ನನ್ನ ಸ್ವ ಸಹಿ ಮತ್ತು ಈ ಕಛೇರಿ ಮೊಹರಿನೊಂದಿಗೆ ದಿ:19–11–2013ರಂದು ಹೊರಡಿಸಿದೆ.

PR.2414 ಸಹಕಾರ ಸಂಘಗಳ ಉಪ ನಿಬಂಧಕರು

SC.10 ದಾವಣಗೆರೆ ಜಿಲ್ಲೆ, ದಾವಣಗೆರೆ.

ಸಹಕಾರ ಇಲಾಖೆ

ಸಹಕಾರ ಸಂಘಗಳ ಉಪ ನಿಬಂಧಕರು, ದಾವಣಗೆರೆ ಜಿಲ್ಲೆ, ಜಿಲ್ಲಾಡಳಿತ ಭವನ, ಎರಡನೇ ಮಹಡಿ, ಕೊಠಡಿ ಸಂ:52, 53, ಕರೂರು ಕೈಗಾರಿಕಾ ಪ್ರದೇಶ, ಪಿ.ಬಿ. ರಸ್ತೆ, ದಾವಣಗೆರೆ. ಇವರ ಕಾರ್ಯಾಲಯ.

ವಿಷಯ: ಸ್ಥಗಿತಗೊಂಡಿರುವ ಕಾಟನ್ ಹ್ಯಾಂಡ್‌ಲೂಮ್ ಸಹಕಾರ ಸಂಘ ನಿ, ದೇವರಹಳ್ಳಿ, ಚನ್ನಗಿರಿ–ತಾ:, ದಾವಣಗೆರೆ–ಜಿಲ್ಲೆ, ಈ ಸಂಘವನ್ನು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ72ರನ್ವಯ ಸಮಾಪನೆಗೊಳಿಸುವ ಬಗ್ಗೆ.

ಉಲ್ಲೇಖ:– 1) ಸಹಕಾರ ಸಂಘಗಳ ಸಹಾಯಕ ನಿಬಂಧಕರು, ದಾವಣಗೆರೆ. ಇವರ ಪತ್ರ ಸಂಖ್ಯೆ: ಸನಿ31 /ಸ್ಥಗಿತ/ ಕಾ.ಹ್ಯಾ.ಸ. ಸಂ.ದೇವರಹಳ್ಳಿ/ಸಿಆರ್–09/2013–14 ದಿ:25–09–2013. ಮತ್ತು ದಿ:06–11–2013.

2) ಈ ಕಚೇರಿ ನೋಟೀಸ್ ಸಂ:ಡಿಆರ್/ಡಿವಿಜಿ/ಸಮಾಪನೆ/ಸಿಆರ್–11/2013–14 ದಿ:21–10–2013.

ಪ್ರಸ್ತಾವನೆ :

ಸಹಕಾರ ಸಂಘಗಳ ಸಹಾಯಕ ನಿಬಂಧಕರು, ದಾವಣಗೆರೆ, ಇವರು ಉಲ್ಲೇಖ(1)ರಲ್ಲಿ ಸಲ್ಲಿಸಿದ ಪ್ರಸ್ತಾವನೆ ಪ್ರಕಾರ ವಿಷಯ ಸೂಚಿತ ಸಂಘದ ಕಾರ್ಯವ್ಯಾಪ್ತಿಯು ತಾಲ್ಲೂಕ್ ಮಟ್ಟಕ್ಕಿಂತ ಕಡಿಮೆ ಕಾರ್ಯವ್ಯಾಪ್ತಿ ಹೊಂದಿದ್ದು, ಇದರ ಕಾರ್ಯಚಟುವಟಿಕೆಗಳು ಕಳೆದ 03–04ವರ್ಷಗಳಿಂದ ಸ್ಥಗಿತಗೊಂಡಿರುತ್ತವೆ. ಸಂಘದ ಆಡಳಿತ ಸಮಿತಿಯವರು ಸಂಘದ ಅಭಿವೃದ್ಧಿ ಬಗ್ಗೆ ಗಮನಿಸುವಲ್ಲಿ ವಿಫಲವಾಗಿರುತ್ತಾರೆ ಸಂಘದ ವಾರ್ಷಿಕ ಮಹಾಸಭೆ ಮತ್ತು ಆಡಳಿತ ಸಮಿತಿ ಸಭೆ ನಡೆಸಿರುವುದಿಲ್ಲ, ಸಂಘದ ಲೆಕ್ಕಪರಿಶೋಧನೆಯಾಗಿರುವುದಿಲ್ಲ, ಹಾಗೂ ಬೈಲಾ ರೀತ್ಯಾ ಕಾರ್ಯನಿರ್ವಹಿಸುತ್ತಿಲ್ಲ ಮತ್ತು ಸಂಘವನ್ನು ಪುನಶ್ಚೇತನಗೊಳಿಸುವಲ್ಲಿ ಆಡಳಿತ ಸಮಿತಿ ಸದಸ್ಯರು ಆಸಕ್ತಿ ಹೊಂದಿರುವುದಿಲ್ಲ. ಈ ಬಗ್ಗೆ ಉಲ್ಲೇಖ (2)ರ ಈ ಕಚೇರಿಯಿಂದ ಸಂಘದ ಪದಾಧಿಕಾರಿಗಳಿಗೆ ನೀಡಿದ ಕಾರಣ ಕೇಳಿ ತಿಳುವಳಿಗೆ ತಹಲ್ ವರೆಗೂ ಯಾರಿಂದಲೂ ಪ್ರತಿಕ್ರಿಯೆ ಬಂದಿರುವುದಿಲ್ಲ, ಈ ಸಂಘದಿಂದ ಸದಸ್ಯರಿಗೆ ಯಾವ ರೀತಿಯ ಪ್ರಯೋಜನವೂ ದೊರೆಯುತ್ತಿಲ್ಲ, ಕಾರಣ, ಈ ಸಂಘವನ್ನು ಇದೇ ರೀತಿ ಮುಂದುವರಿಸಲು ಬಿಟ್ಟಲ್ಲಿ ಸಂಘವು ಇನ್ನಷ್ಟು ಅಧೋಗತಿಗೆ ಹೋಗುವ ಸಂಭವವಿರುವುದರಿಂದ ಸಮಾಪನೆಗೊಳಿಸುವುದೇ ಸೂಕ್ತವೆಂದು ಕಂಡುಬಂದಿರುವುದರಿಂದ ಈ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

ನಂ:ಡಿಆರ್/ಡಿವಿಜಿ/ಎಲ್‌ಕ್ಯೂಡಿ/ಸಿಆರ್–11/2013–14 ದಿನಾಂಕ: 9–11–2013

<u>ಆದೇಶ</u>

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ, ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 72(2) ರನ್ವಯ ಸರ್ಕಾರದ ಅಧಿಸೂಚನೆ ಸಂಖ್ಯೆ:ಸಿಓ:139:ಸಿಎಲ್ಎಂ:2010. ದಿನಾಂಕ:17–02–2011 ರ ಪ್ರಕಾರ ದತ್ತವಾದ ಅಧಿಕಾರದನ್ವಯ ದಾವಣಗೆರೆ ಜಿಲ್ಲಾ ಸಹಕಾರ ಸಂಘಗಳ ಉಪನಿಬಂಧಕರು, ಎಸ್.ಎಚ್. ಬೆಲ್ಲದ್, ಆದ ನನಗೆ ದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ, ಸ್ಥಗಿತಗೊಂಡಿರುವ ಕಾಟನ್ ಹ್ಯಾಂಡ್‌ಲೂಮ್ ಸಹಕಾರ

ಸಂಘ ನಿ, ದೇವರಹಳ್ಳಿ, ದಾವಣಗೆರೆ–ಜಿಲ್ಲೆ, ಇದನ್ನು ಸಮಾಪನೆಗೊಳಿಸಿ, ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ1959ನೇ ಕಲಂ 73(1)ರನ್ವಯ **ಸಹಕಾರ ಸಂಘಗಳ ನಿರೀಕ್ಷಕರು, ಸಹಕಾರ ಅಭಿವೃದ್ಧಿ ಅಧಿಕಾರಿ ಕಚೇರಿ, ಚನ್ನಗಿರಿ,** ಇವರನ್ನು ಸಂಘದ ಸಮಾಪಕರನ್ನಾಗಿ ನೇಮಿಸಿರುತ್ತೇನೆ. ಸಮಾಪಕರು ಸಂಘದ ಪ್ರಭಾರವನ್ನು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 73ರ ಪ್ರಕಾರ ಪಡೆದುಕೊಳ್ಳತಕ್ಕದ್ದು. ಹಾಗೂ ಸಂಘದ ಆಸ್ತಿ–ಜವಾಬ್ದಾರಿಗಳ ವಿಲೇವಾರಿಗಾಗಿ ಆದ್ಯತಾಪಟ್ಟಿ ತಯಾರಿಸಿ, ಈ ಪ್ರಾಧಿಕಾರದಿಂದ ಅನುಮೋದನೆ ಪಡೆದು ಕಾಯ್ದೆ ಕಲಂ 74 ರನ್ವಯ ಸಮಾಪನಾ ಕಾರ್ಯ ನಿರ್ವಹಿಸಲು ಆದೇಶಿಸಿದೆ.

ನನ್ನ ಸಹಿ ಮತ್ತು ಕಛೇರಿಯ ಮೊಹರಿನೊಂದಿಗೆ ದಿನಾಂಕ:19–11–2013 ರಂದು ಈ ಆದೇಶವನ್ನು ಹೊರಡಿಸಿರುತ್ತೇನೆ.

ಎಸ್.ಎಚ್. ಬೆಲ್ಲದ್

PR.2409 ಸಹಕಾರ ಸಂಘಗಳ ಉಪ ನಿಬಂಧಕರು

SC.10 ದಾವಣಗೆರೆ ಜಿಲ್ಲೆ, ದಾವಣಗೆರೆ.

ಸಹಕಾರ ಇಲಾಖೆ

ಸಹಕಾರ ಸಂಘಗಳ ಉಪ ನಿಬಂಧಕರು, ದಾವಣಗೆರೆ ಜಿಲ್ಲೆ, ಜಿಲ್ಲಾಡಳಿತ ಭವನ, ಎರಡನೇ ಮಹಡಿ, ಕೊಠಡಿ ಸಂ:52, 53, ಕರೂರು ಕೈಗಾರಿಕಾ ಪ್ರದೇಶ, ಪಿ.ಬಿ. ರಸ್ತೆ, ದಾವಣಗೆರೆ. ಇವರ ಕಾರ್ಯಾಲಯ.

ವಿಷಯ: ಸ್ಥಗಿತಗೊಂಡಿರುವ ಶ್ರೀ. ಆಂಜನೇಯ ಮೀನುಗಾರರ ಸಹಕಾರ ಸಂಘ ನಿ,ಕಂಸಾಗರ, ಚನ್ನಗಿರಿ–ತಾ:, ದಾವಣಗೆರೆ–ಜಿಲ್ಲೆ, ಈ ಸಂಘವನ್ನು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ72ರನ್ವಯ ಸಮಾಪನೆಗೊಳಿಸುವಬಗ್ಗೆ.

ಉಲ್ಲೇಖ:– 1) ಸಹಕಾರ ಸಂಘಗಳ ಸಹಾಯಕ ನಿಬಂಧಕರು, ದಾವಣಗೆರೆ. ಇವರ ಪತ್ರ ಸಂಖ್ಯೆ:ಸನಿ31/ಸ್ಥಗಿತ/ ಆ.ಮೀ.ಸ.ಸಂ.ನಿ, ಕಂಸಾಗರ/ಸಿಆರ್–07/2013–14 ದಿ:25–09–2013. ಮತ್ತು ದಿ:06–11–2013.

2) ಈ ಕಚೇರಿ ನೋಟೀಸ್ ಸಂ:ಡಿಆರ್/ಡಿವಿಜಿ/ಸಮಾಪನೆ/ಸಿಆರ್–10/2013–14 ದಿ:21–10–2013.

ಪ್ರಸ್ತಾವನೆ :

ಸಹಕಾರ ಸಂಘಗಳ ಸಹಾಯಕ ನಿಬಂಧಕರು, ದಾವಣಗೆರೆ, ಇವರು ಉಲ್ಲೇಖ(1)ರಲ್ಲಿ ಸಲ್ಲಿಸಿದ ಪ್ರಸ್ತಾವನೆ ಪ್ರಕಾರ ವಿಷಯ ಸೂಚಿತ ಸಂಘದ ಕಾರ್ಯವ್ಯಾಪ್ತಿಯು ತಾಲ್ಲೂಕ್ ಮಟ್ಟಕ್ಕಿಂತ ಕಡಿಮೆ ಕಾರ್ಯವ್ಯಾಪ್ತಿ ಹೊಂದಿದ್ದು, ಇದರ ಕಾರ್ಯಚಟುವಟಿಕೆಗಳು ಕಳೆದ 03–04ವರ್ಷಗಳಿಂದ ಸ್ಥಗಿತಗೊಂಡಿರುತ್ತವೆ. ಸಂಘದ ಆಡಳಿತ ಸಮಿತಿಯವರು ಸಂಘದ ಅಭಿವೃದ್ಧಿ ಬಗ್ಗೆ ಗಮನಿಸುವಲ್ಲಿ ವಿಫಲವಾಗಿರುತ್ತಾರೆ ಸಂಘದ ವಾರ್ಷಿಕ ಮಹಾಸಭೆ ಮತ್ತು ಆಡಳಿತ ಸಮಿತಿ ಸಭೆ ನಡೆಸಿರುವುದಿಲ್ಲ, ಸಂಘದ ಲೆಕ್ಕಪರಿಶೋಧನೆಯಾಗಿರುವುದಿಲ್ಲ, ಹಾಗೂ ಬೈಲಾ ರೀತ್ಯಾ ಕಾರ್ಯನಿರ್ವಹಿಸುತ್ತಿಲ್ಲ ಮತ್ತು ಸಂಘವನ್ನು ಪುನಶ್ಚೇತನಗೊಳಿಸುವಲ್ಲಿ ಆಡಳಿತ ಸಮಿತಿ ಸದಸ್ಯರು ಆಸಕ್ತಿ ಹೊಂದಿರುವುದಿಲ್ಲ. ಈ ಬಗ್ಗೆ ಉಲ್ಲೇಖ (2)ರ ಈ ಕಚೇರಿಯಿಂದ ಸಂಘದ ಪದಾಧಿಕಾರಿಗಳಿಗೆ ನೀಡಿದ ಕಾರಣ ಕೇಳಿ ತಿಳುವಳಿಗೆ ತಹಲ್ ವರೆಗೂ ಯಾರಿಂದಲೂ ಪ್ರತಿಕ್ರಿಯೆ ಬಂದಿರುವುದಿಲ್ಲ, ಈ ಸಂಘದಿಂದ ಸದಸ್ಯರಿಗೆ ಯಾವ ರೀತಿಯ ಪ್ರಯೋಜನವೂ ದೊರೆಯುತ್ತಿಲ್ಲ, ಕಾರಣ, ಈ ಸಂಘವನ್ನು ಇದೇ ರೀತಿ ಮುಂದುವರಿಸಲು ಬಿಟ್ಟಲ್ಲಿ ಸಂಘವು ಇನ್ನಷ್ಟು ಅಧೋಗತಿಗೆ ಹೋಗುವ ಸಂಭವವಿರುವುದರಿಂದ ಸಮಾಪನೆಗೊಳಿಸುವುದೇ ಸೂಕ್ತವೆಂದು ಕಂಡುಬಂದಿರುವುದರಿಂದ ಈ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

ನಂ:ಡಿಆರ್/ಡಿವಿಜಿ/ಎಲ್‌ಕ್ಯೂಡಿ/ಸಿಆರ್–10/2013–14, ದಿನಾಂಕ: 9–11–2013

ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ, ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 72(2) ರನ್ವಯ ಸರ್ಕಾರದ ಅಧಿಸೂಚನೆ ಸಂಖ್ಯೆ:ಸಿಓ:139:ಸಿಎಲ್ಎಂ:2010. ದಿನಾಂಕ:17–02–2011 ರ ಪ್ರಕಾರ ದತ್ತವಾದ ಅಧಿಕಾರದನ್ವಯ ದಾವಣಗೆರೆ ಜಿಲ್ಲಾ ಸಹಕಾರ ಸಂಘಗಳ ಉಪನಿಬಂಧಕರು, ಎಸ್.ಎಚ್. ಬೆಲ್ಲದ್, ಆದ ನನಗೆ ದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ, ಸ್ಥಗಿತಗೊಂಡಿರುವ ಶ್ರೀ. ಆಂಜನೇಯ ಮೀನುಗಾರರ ಸಹಕಾರ ಸಂಘ ನಿ, ಕಂಸಾಗರ, ದಾವಣಗೆರೆ–ಜಿಲ್ಲೆ, ಇದನ್ನು ಸಮಾಪನೆಗೊಳಿಸಿ, ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ1959ನೇ ಕಲಂ 73(1)ರನ್ವಯ **ಸಹಕಾರ ಅಭಿವೃದ್ಧಿ ಅಧಿಕಾರಿ, ಚನ್ನಗಿರಿ,** ಇವರನ್ನು ಸಂಘದ ಸಮಾಪಕರನ್ನಾಗಿ ನೇಮಿಸಿರುತ್ತೇನೆ. ಸಮಾಪಕರು ಸಂಘದ ಪ್ರಭಾರವನ್ನು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 73ರ ಪ್ರಕಾರ ಪಡೆದುಕೊಳ್ಳತಕ್ಕದ್ದು. ಹಾಗೂ ಸಂಘದ ಆಸ್ತಿ–ಜವಾಬ್ದಾರಿಗಳ ವಿಲೇವಾರಿಗಾಗಿ ಆದ್ಯತಾಪಟ್ಟಿ ತಯಾರಿಸಿ, ಈ ಪ್ರಾಧಿಕಾರದಿಂದ ಅನುಮೋದನೆ ಪಡೆದು ಕಾಯ್ದೆ ಕಲಂ 74 ರನ್ವಯ ಸಮಾಪನಾ ಕಾರ್ಯ ನಿರ್ವಹಿಸಲು ಆದೇಶಿಸಿದೆ.

ನನ್ನ ಸಹಿ ಮತ್ತು ಕಛೇರಿಯ ಮೊಹರಿನೊಂದಿಗೆ ದಿನಾಂಕ:19–11–2013 ರಂದು ಈ ಆದೇಶವನ್ನು ಹೊರಡಿಸಿರುತ್ತೇನೆ.

ಎಸ್.ಎಚ್. ಬೆಲ್ಲದ್

PR.2408 ಸಹಕಾರ ಸಂಘಗಳ ಉಪ ನಿಬಂಧಕರು

SC.10 ದಾವಣಗೆರೆ ಜಿಲ್ಲೆ, ದಾವಣಗೆರೆ.

ಸಹಕಾರ ಇಲಾಖೆ

ಸಹಕಾರ ಸಂಘಗಳ ಉಪ ನಿಬಂಧಕರು, ದಾವಣಗೆರೆ ಜಿಲ್ಲೆ, ಜಿಲ್ಲಾಡಳಿತ ಭವನ, ಎರಡನೇ ಮಹಡಿ, ಕೊಠಡಿ ಸಂ:52, 53, ಕರೂರು ಕೈಗಾರಿಕಾ ಪ್ರದೇಶ, ಪಿ.ಬಿ. ರಸ್ತೆ, ದಾವಣಗೆರೆ. ಇವರ ಕಾರ್ಯಾಲಯ.

ವಿಷಯ: ಸ್ಥಗಿತಗೊಂಡಿರುವ ಶ್ರೀ. ಇಂದಿರಾ ಪ.ಜಾತಿ/ಪ.ಪಂ.ಮಹಿಳಾ ವಿವಿಧೋದ್ದೇಶ ಸಹಕಾರ ಸಂಘ ನಿ,ಕತ್ತಲಗೆರೆ, ಚನ್ನಗಿರಿ–ತಾ:, ದಾವಣಗೆರೆ–ಜಿಲ್ಲೆ, ಈ ಸಂಘವನ್ನು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ72ರನ್ವಯ ಸಮಾಪನೆಗೊಳಿಸುವ ಬಗ್ಗೆ.

ಉಲ್ಲೇಖ:– 1) ಸಹಕಾರ ಸಂಘಗಳ ಸಹಾಯಕ ನಿಬಂಧಕರು, ದಾವಣಗೆರೆ. ಇವರ ಪತ್ರ ಸಂಖ್ಯೆ:ಸನಿ31/ಸ್ಥಗಿತ/ಇಂದಿರಾ ಪ.ಜಾ/ಪ.ಪಂಸ.ಸಂ.ನಿ.,/ಸಿಆರ್–11/2013–14 ದಿ:25–09–2013. ಮತ್ತು ದಿ:06–11–2013.

2) ಈ ಕಚೇರಿ ನೋಟೀಸ್ ಸಂ:ಡಿಆರ್/ಡಿವಿಜಿ/ಸಮಾಪನೆ/ಸಿಆರ್–09/2013–14 ದಿ:21–10–2013.

ಪ್ರಸ್ತಾವನೆ : –

ಸಹಕಾರ ಸಂಘಗಳ ಸಹಾಯಕ ನಿಬಂಧಕರು, ದಾವಣಗೆರೆ, ಇವರು ಉಲ್ಲೇಖ(1)ರಲ್ಲಿ ಸಲ್ಲಿಸಿದ ಪ್ರಸ್ತಾವನೆ ಪ್ರಕಾರ ವಿಷಯ ಸೂಚಿತ ಸಂಘದ ಕಾರ್ಯವ್ಯಾಪ್ತಿಯು ತಾಲ್ಲೂಕ್ ಮಟ್ಟಕ್ಕಿಂತ ಕಡಿಮೆ ಕಾರ್ಯವ್ಯಾಪ್ತಿ ಹೊಂದಿದ್ದು, ಇದರ ಕಾರ್ಯಚಟುವಟಿಕೆಗಳು ಕಳೆದ 03–04ವರ್ಷಗಳಿಂದ ಸ್ಥಗಿತಗೊಂಡಿರುತ್ತವೆ. ಸಂಘದ ಆಡಳಿತ ಸಮಿತಿಯವರು ಸಂಘದ ಅಭಿವೃದ್ಧಿ ಬಗ್ಗೆ ಗಮನಿಸುವಲ್ಲಿ ವಿಫಲವಾಗಿರುತ್ತಾರೆ ಸಂಘದ ವಾರ್ಷಿಕ ಮಹಾಸಭೆ ಮತ್ತು ಆಡಳಿತ ಸಮಿತಿ ಸಭೆ ನಡೆಸಿರುವುದಿಲ್ಲ, ಸಂಘದ ಲೆಕ್ಕಪರಿಶೋಧನೆಯಾಗಿರುವುದಿಲ್ಲ, ಹಾಗೂ ಬೈಲಾ ರೀತ್ಯಾ ಕಾರ್ಯನಿರ್ವಹಿಸುತ್ತಿಲ್ಲ ಮತ್ತು ಸಂಘವನ್ನು ಪುನಶ್ಚೇತನಗೊಳಿಸುವಲ್ಲಿ ಆಡಳಿತ ಸಮಿತಿ ಸದಸ್ಯರು ಆಸಕ್ತಿ ಹೊಂದಿರುವುದಿಲ್ಲ. ಈ ಬಗ್ಗೆ ಉಲ್ಲೇಖ (2)ರ ಈ ಕಚೇರಿಯಿಂದ ಸಂಘದ ಪದಾಧಿಕಾರಿಗಳಿಗೆ ನೀಡಿದ ಕಾರಣ ಕೇಳಿ ತಿಳುವಳಿಗೆ ತಹಲ್ ವರೆಗೂ ಯಾರಿಂದಲೂ ಪ್ರತಿಕ್ರಿಯೆ ಬಂದಿರುವುದಿಲ್ಲ, ಈ ಸಂಘದಿಂದ ಸದಸ್ಯರಿಗೆ ಯಾವ ರೀತಿಯ ಪ್ರಯೋಜನವೂ ದೊರೆಯುತ್ತಿಲ್ಲ, ಕಾರಣ, ಈ ಸಂಘವನ್ನು ಇದೇ ರೀತಿ ಮುಂದುವರಿಸಲು ಬಿಟ್ಟಲ್ಲಿ ಸಂಘವು ಇನ್ನಷ್ಟು ಅಧೋಗತಿಗೆ ಹೋಗುವ ಸಂಭವವಿರುವುದರಿಂದ ಸಮಾಪನೆಗೊಳಿಸುವುದೇ ಸೂಕ್ತವೆಂದು ಕಂಡುಬಂದಿರುವುದರಿಂದ ಈ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

ನಂ:ಡಿಆರ್/ಡಿವಿಜಿ/ಎಲ್‌ಕ್ಯೂಡಿ/ಸಿಆರ್–05/2013–14, ದಿನಾಂಕ: 22–11–2013

–: ಆದೇಶ :–

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ, ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 72(2) ರನ್ವಯ ಸರ್ಕಾರದ ಅಧಿಸೂಚನೆ ಸಂಖ್ಯೆ:ಸಿಓ:139:ಸಿಎಲ್ಎಂ:2010. ದಿನಾಂಕ:17–02–2011 ರ ಪ್ರಕಾರ ದತ್ತವಾದ ಅಧಿಕಾರದನ್ವಯ ದಾವಣಗೆರೆ ಜಿಲ್ಲಾ ಸಹಕಾರ ಸಂಘಗಳ ಉಪನಿಬಂಧಕರು, ಎಸ್.ಎಚ್. ಬೆಲ್ಲದ್, ಆದ ನನಗೆ ದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ, ಸ್ಥಗಿತಗೊಂಡಿರುವ ಶ್ರೀ. ಇಂದಿರಾ ಪ.ಜಾತಿ/ಪ.ಪಂ.ಮಹಿಳಾ ವಿವಿದೋದ್ದೇಶ ಸಹಕಾರ ಸಂಘ ನಿ, ಕತ್ತಲಗೆರೆ, ದಾವಣಗೆರೆ–ಜಿಲ್ಲೆ, ಇದನ್ನು ಸಮಾಪನೆಗೊಳಿಸಿ, ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ1959ನೇ ಕಲಂ 73(1)ರನ್ವಯ **ಶ್ರೀ.ಸಿ.ಜಿ. ಜಗದೀಶ್. ದ್ವಿ.ದ.ಸ., ಸಹಕಾರ ಸಂಘಗಳ ಸಹಾಯಕ ನಿಬಂಧಕರ ಕಚೇರಿ, ದಾವಣಗೆರೆ,**ಇವರನ್ನು ಸಂಘದ ಸಮಾಪಕರನ್ನಾಗಿ ನೇಮಿಸಿರುತ್ತೇನೆ. ಸಮಾಪಕರು ಸಂಘದ ಪ್ರಭಾರವನ್ನು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 73ರ ಪ್ರಕಾರ ಪಡೆದುಕೊಳ್ಳತಕ್ಕದ್ದು. ಹಾಗೂ ಸಂಘದ ಆಸ್ತಿ–ಜವಾಬ್ದಾರಿಗಳ ವಿಲೇವಾರಿಗಾಗಿ ಆದ್ಯತಾಪಟ್ಟಿ ತಯಾರಿಸಿ, ಈ ಪ್ರಾಧಿಕಾರದಿಂದ ಅನುಮೋದನೆ ಪಡೆದು ಕಾಯ್ದೆ ಕಲಂ 74 ರನ್ವಯ ಸಮಾಪನಾ ಕಾರ್ಯ ನಿರ್ವಹಿಸಲು ಆದೇಶಿಸಿದೆ.

ನನ್ನ ಸಹಿ ಮತ್ತು ಕಛೇರಿಯ ಮೊಹರಿನೊಂದಿಗೆ ದಿನಾಂಕ:22–11–2013 ರಂದು ಈ ಆದೇಶವನ್ನು ಹೊರಡಿಸಿರುತ್ತೇನೆ.

ಎಸ್.ಎಚ್. ಬೆಲ್ಲದ್
ಸಹಕಾರ ಸಂಘಗಳ ಉಪ ನಿಬಂಧಕರು
ದಾವಣಗೆರೆ ಜಿಲ್ಲೆ, ದಾವಣಗೆರೆ.

PR.2416
SC.10

ಸರ್ಕಾರಿ ಕೇಂದ್ರ ಮುದ್ರಣಾಲಯ, ಘಟಕ–2, ಬೆಂಗಳೂರು